ಭಾಷೆಗಳು

ತೆರೆದಿಟ್ಟ ಸಾಧ್ಯತೆಗಳು

ಕಲ್ಪನೆಗಳಿಗೆ

ಹೊತ್ತಿಸಿದ ಕಿಡಿಗಳು

ಪ್ರಥಮ್ ಬುಕ್ಸ್

ವಾರ್ಷಿಕ ವರದಿ 2023-2024

ಆಡಳಿತ ಮಂಡಳಿಯ ವರದಿ

ಮಕ್ಕಳಿಗೆ ಕತೆಗಳ ಮೂಲಕ ಓದಿನ ಸಂತಸವನ್ನು ಹಂಚಿದ ಪ್ರಥಮ್ ಬುಕ್ಸ್‌ಗೆ ಈ ವರ್ಷ ಎರಡು ಅರ್ಥಪೂರ್ಣ ದಶಕಗಳನ್ನು ಪೂರೈಸಿದ ಮೈಲಿಗಲ್ಲು. ಪ್ರತಿಯೊಂದು ಮಗುವಿನ ಕೈಲಿ ಪುಸ್ತಕ ನೋಡುವ ದಿಟ್ಟ ನಿಲುವಿನೊಂದಿಗೆ ಆರಂಭವಾದ ಸಂಸ್ಥೆಯು, ಬದಲಾಗುತ್ತಿರುವ ತಂತ್ರಜ್ಞಾನ ಮತ್ತು ಪರಿಸರದಲ್ಲಿ ವ್ಯವಸ್ಥೆಯೊಂದಿಗೆ ಹೆಜ್ಜೆ ಹಾಕುತ್ತಾ, ಕತೆ ಹೇಳುವ ರೀತಿಗಳನ್ನು ಮರುವ್ಯಾಖ್ಯಾನಿಸುತ್ತಾ ದೊಡ್ಡ ಪ್ರಕಾಶನ ಸಂಸ್ಥೆಯಾಗಿ ಬೆಳೆದು ನಿಂತಿದೆ.

ಎರಡು ದಶಕಗಳ ಮೈಲಿಗಲ್ಲನ್ನು ದಾಟುತ್ತಿರುವಂತೆ, ನಮ್ಮನ್ನು ನಾವು ಕೇಳಿಕೊಳ್ಳುತ್ತಿರುವುದು: ಮಕ್ಕಳು ಕತೆಗಳನ್ನು ಸಂಭ್ರಮಿಸಲು ಏನು ಮಾಡಬೇಕು? ಕತೆಗಳನ್ನು ಹೇಗೆ ಹೇಳಬೇಕು? ಮಕ್ಕಳಿಗೆ ಯಾವ ರೀತಿಯ ಕತೆಗಳು, ಯಾವ ರೀತಿಯ ನಿರೂಪಣೆ ಖುಷಿ ಕೊಡಬಹುದು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ- ಕತೆ ಪುಸ್ತಕಗಳು, ಕತೆಯ ಕಾರ್ಡುಗಳು, ಮೊಬೈಲ್‌ನಲ್ಲಿ ಮಿಸ್ಡ್ ಕಾಲ್ ಮೂಲಕ ಕತೆಗಳು, ವಿದ್ಯುನ್ಮಾನ ಮಾಧ್ಯಮದ ಮೂಲಕ –ಚಿಕ್ಕದಾದ, ಚೆಂದ ಓದಬಹುದಾದ, ಆಪ್ತವೆನಿಸುವಂತಹ ಕತೆಗಳನ್ನು ಮೌಖಿಕವಾಗಿ ನಿರೂಪಿಸುವುದು – ಹೀಗೆ ಅನೇಕ ರೀತಿಗಳನ್ನು ಪ್ರಯತ್ನಿಸಿದ್ದೇವೆ. ಮಾತು-ಕತೆ ಆಪ್ತವಾಗಿ, ಸರಳವಾಗಿ ಇರಬೇಕು ಎನ್ನುವುದರ ಕಡೆ ನಾವು ನಿರಂತರವಾಗಿ ಗಮನ ನೀಡುತ್ತೇವೆ. ಅದನ್ನು ಆಪ್ತವಾಗಿಸಬೇಕಾದರೆ ಅದು ಆಪ್ತವೆನಿಸುವಂತಹ ಭಾಷೆಯಲ್ಲಿ ಇರಬೇಕು.

ನಾವು ಯೋಚಿಸುವುದು, ಕನಸು ಕಾಣುವುದು, ಎಣಿಕೆ-ಗುಣಾಕಾರ-ಭಾಗಾಕಾರ ಎಲ್ಲವೂ –ಇಂಗ್ಲಿಷ್ ಅಲ್ಲದ ನಮಗೆ ಸಹಜವಾದ ಭಾಷೆಯಲ್ಲಿ. ಅದಕ್ಕಾಗಿಯೇ ನಮ್ಮ ಕನಸುಗಳು, ಆಲೋಚನೆಗಳನ್ನು ಅನುರಣಿಸಬಲ್ಲ ನಮ್ಮದೇ ಭಾಷೆಯಲ್ಲಿ ಹೇಳುವಂತಹ ಕತೆಗಳು ಬೇಕಾಗುತ್ತವೆ. ಪ್ರತಿಯೊಂದು ಭಾಷೆಗೂ ತನ್ನದೇ ಆದ ನುಡಿಗಟ್ಟುಗಳು, ಸಾಂಸ್ಕೃತಿಕ ಸೂಕ್ಷ್ಮತೆಗಳು, ವಿಶಿಷ್ಟವೆನಿಸುವ ಪ್ರತಿಮೆಗಳಿರುತ್ತವೆ. ದೇಸಿ ಅನ್ನಿಸುವಂತಹ ರೂಪಕಗಳು, ಸ್ಥಳೀಯತೆಯೊಂದಿಗೆ ಸಂಬಂಧ ಹೊಂದಿದ ಪ್ರತಿಮೆಗಳು ಕತೆಗಳೊಂದಿಗೆ ಗಾಢ ಸಂಪರ್ಕವನ್ನು ಹೊಂದಿವೆ. ಆದ್ದರಿಂದ ಬಹಳ ಸುಂದರವಾಗಿ ವಿಷಯವನ್ನು ಪ್ರಸ್ತುತ ಪಡಿಸುವುದರೊಂದಿಗೆ ಮಕ್ಕಳಿಗೆ ಪ್ರಸ್ತುತ ಎನಿಸುವಂತಹ ಪರಿಚಿತ ಭಾಷೆಯನ್ನು ಬಳಸುವುದರತ್ತಲೂ ನಾವು ಗಮನ ಕೊಡುತ್ತೇವೆ.

ಅನುವಾದಗಳು ಮಕ್ಕಳಿಗೆ ನೀಡಬಹುದಾದ ಕತೆಗಳ ಸಂಖ್ಯೆಯನ್ನು ಹೆಚ್ಚಿಸಬಹುದಾದರೂ, ಕತೆಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ಹೊಂದಿಸಿ, ಅವುಗಳ ಉದ್ದೇಶವನ್ನು ಸೂಕ್ಷ್ಮವಾಗಿ ಹಿಡಿದಿಡುವುದರಲ್ಲಿ ಅನುವಾದಗಳಿಗೆ ತಮ್ಮದೇ ಆದ ಮಿತಿಯಿದೆ. ಹಲವು ಭಾಷೆಗಳಲ್ಲಿ ಕತೆಗಳನ್ನು ಒದಗಿಸುವುದಲ್ಲದೆ, ಆಯಾ ಭಾಷೆಗಳಲ್ಲೇ ವೈವಿಧ್ಯಮಯ ಕತೆಗಳನ್ನು ಸೃಷ್ಟಿಸುವುದೂ ನಮ್ಮ ಕರ್ತವ್ಯವೆಂದು ಭಾವಿಸಿದ್ದೇವೆ. ಹೀಗಾಗಿ ಈ ವಿಶಾಲ ಕಥಾ ಜಗತ್ತಿನಲ್ಲಿ ಮಕ್ಕಳ ಅನುಭವವನ್ನು ಹೆಚ್ಚಿಸುವ ಸಲುವಾಗಿ ನಮ್ಮ ಅಷ್ಟೂ ಗಮನವು ಸ್ವಂತ ಭಾಷೆಯಲ್ಲಿಯೇ ಕತೆಗಳನ್ನು ಸೃಜಿಸುವ ಪ್ರಕ್ರಿಯೆಯಲ್ಲಿದೆ. ಅದಕ್ಕಾಗಿ ನಾವು ***ಲ್ಯಾಂಗ್ವೇಜ್ ಫರ್ಸ್ಟ್*** ಸರಣಿಯನ್ನು ಪ್ರಾರಂಭಿಸಿದ್ದೇವೆ. ಇದು ನಾವು ಕನಸು ಕಾಣುವ, ಯೋಚಿಸುವ ಭಾಷೆಯಲ್ಲಿ ಕತೆಗಳನ್ನು ಹುಡುಕಾಡುವ ಪ್ರಕ್ರಿಯೆ.

ಈ ವರ್ಷ ನಾವು ಮೂಲತಃ 11 ಭಾಷೆಗಳಲ್ಲಿ 20 ಪುಸ್ತಕಗಳನ್ನು, 10 ವಾಲ್ ಬುಕ್ಸ್‌ನ್ನೂ ಪ್ರಕಟಿಸಿದ್ದೇವೆ. ಅನುವಾದಗಳಲ್ಲಿ, ಒಂದು ಭಾರತೀಯ ಭಾಷೆಯಿಂದ ಮತ್ತೊಂದಕ್ಕೆ ನೇರವಾಗಿ 8 ಪುಸ್ತಕಗಳನ್ನು ಅನುವಾದಿಸಿದ್ದೇವೆ. ಬೋಡೋ, ಕಾಶ್ಮೀರಿ, ನೇಪಾಳಿ ಸೇರಿದಂತೆ 10 ಭಾಷೆಗಳಲ್ಲಿ 8 ಅನುವಾದ ಕಾರ್ಯಾಗಾರಗಳನ್ನು ನಡೆಸಿದ್ದೇವೆ. ಮೂಲತಃ ಇಂಗ್ಲಿಷಿನಲ್ಲಿ ಬರೆಯದ, ಭಾರತೀಯ ಭಾಷೆಗಳಲ್ಲಿ ಬರೆಯಲಾದ ಪುಸ್ತಕಗಳನ್ನು ಸಂಗ್ರಹಿಸುವತ್ತ ಗಮನಹರಿಸಿದ್ದೇವೆ.

ಮಕ್ಕಳಿಗೆ ಸಂಬಂಧಿಸಿದ ಸ್ಥಳೀಯವಾಗಿ, ಪ್ರಸ್ತುತವಾದ ವಿಷಯವನ್ನು ಸೃಷ್ಟಿಸುವುದನ್ನು ಮುಂದುವರಿಸುತ್ತಿದ್ದಂತೆ, ಸ್ಟೋರಿವೀವರ್ ವೇದಿಕೆಯು ಹಿಂದೆಂದಿಗಿಂತ ಹೆಚ್ಚಾಗಿ, ಅಗತ್ಯಕ್ಕೆ ತಕ್ಕಂತೆ, ಸ್ಥಳೀಯತೆಗೆ ಹೇಗೆ ಒಗ್ಗಿಕೊಂಡಿದೆ ಎನ್ನುವುದನ್ನು ಗಮನಿಸುತ್ತಿದ್ದೇವೆ.

ಈ ವೇದಿಕೆಯು ಮಕ್ಕಳಿಗೆ ಅವರದೇ ಭಾಷೆಯಲ್ಲಿ ಕತೆಗಳ ಮಾಂತ್ರಿಕ ಲೋಕವನ್ನು ತೆರೆದಿಡಲು ಸಹಾಯ ಮಾಡಿದೆ. ಅದು ಮೇಘಾಲಯದ ಖಾಸಿ, ಗಾರೊ, ಪ್ನಾರ್‌ಗಳಲ್ಲಿನ ಮಕ್ಕಳಿಗೆ ತೆರೆದಿಟ್ಟ ಜಾನಪದ ಕತೆಗಳಾಗಿರಬಹುದು, ಔರಂಗಬಾದಿನ ಉರ್ದು ಶಾಲೆಯ ಮಕ್ಕಳ ಬಣ್ಣ ಬಣ್ಣದ ಚಿತ್ರಪುಸ್ತಕಗಳಾಗಿರಬಹುದು ಅಥವಾ ಗೋವಾದಲ್ಲಿ ಕೊಂಕಣಿ, ಮರಾಠಿಯಲ್ಲಿ ಆಯೋಜಿಸಿದ ಓದುವ ಕಾರ್ಯಕ್ರಮಗಳಾಗಿರಬಹುದು. ಇಂದು, ಬೇರೆ ಬೇರೆ ಸಹಭಾಗಿತ್ವಗಳೊಂದಿಗೆ ಓದುವ ಉಪಕ್ರಮಗಳು, ತರಬೇತಿ ಕಾರ್ಯಕ್ರಮಗಳ ಮೂಲಕ ವೇದಿಕೆಯು ಬಹುಭಾಷಾ ಓದು ಚಳವಳಿಯ ಕೇಂದ್ರವಾಗಿದೆ. ನಮ್ಮ ವೇದಿಕೆ 361 ಭಾಷೆಗಳಲ್ಲಿ 60,000 ಕಥೆಗಳನ್ನು ಹೊಂದಿದ್ದು, ಅವುಗಳಲ್ಲಿ ಸರಿಸುಮಾರು 60% ಹೆಚ್ಚು ಪ್ರಚಲಿತವಿಲ್ಲದ ಭಾಷೆಗಳಾಗಿವೆ.

ಮತ್ತೊಂದು ದಶಕದತ್ತ ಹೆಜ್ಜೆ ಹಾಕಲಿರುವ ಈ ಹೊತ್ತಿನಲ್ಲಿ, ನಮ್ಮ ಪುಸ್ತಕಗಳು ಮಕ್ಕಳಿಗೆ ಇನ್ನಷ್ಟು ಸುಲಭವಾಗಿ ಸಿಗುವಂತೆ ಮಾಡುವುದು ನಮ್ಮ ಪ್ರಯತ್ನವಾಗಿದೆ. ಭಾಷೆ ಇದನ್ನು ಸಾಧಿಸಲು ಇರುವ ಮುಖ್ಯ ದಾರಿಯಾಗಿದೆ.

ಪ್ರಥಮ್ ಬುಕ್ಸ್ ತಂಡ ಮತ್ತು ಟ್ರಸ್ಟಿಗಳ ಪರವಾಗಿ,

ಪ್ರೊ. ಎಂ ಎಸ್ ಶ್ರೀರಾಮ್

ಟ್ರಸ್ಟಿ

ಹಲವು ಕತೆಗಳು, ಹಲವು ದನಿಗಳು

ಪುಸ್ತಕಗಳಿಗೊಂದು ಮಾಂತ್ರಿಕ ಗುಣವಿದೆ. ಅವು ಓದುಗರನ್ನು ಅಪರಿಚಿತ ಜಾಗಗಳಿಗೆ ಕೊಂಡೊಯ್ದು ಅಸಾಧಾರಣ ಆಯಾಮಗಳನ್ನು ತೋರಬಲ್ಲವು. ಇದು ಓದುಗರಿಗೆ ಇಲ್ಲಿ, ಈ ಕ್ಷಣದ ಕುರಿತು, ಬದುಕಿನ ಸೌಂದರ್ಯ, ಸಂಕೀರ್ಣತೆಯ ಕುರಿತು ಚಿಂತಿಸುವಂತೆ ಮಾಡುತ್ತದೆ. ಮಕ್ಕಳ ಕೈಗೆ ಬಹುಬೇಗ ಪುಸ್ತಕಗಳು ಸಿಕ್ಕರೆ ಓದು-ಪುಸ್ತಕಗಳ ಜೊತೆ ಅವರಿಗೊಂದು ಆಪ್ತಸಂಬಂಧ ಬೆಳೆಯುತ್ತದೆ. ಓದಿನ ಪ್ರಪಂಚಕ್ಕೆ ಓದುಗನನ್ನು ಕೊಂಡೊಯ್ಯುವ ಪುಸ್ತಕಗಳು ಲವಲವಿಕೆಯೊಂದಿಗೆ ಅರ್ಥಪೂರ್ಣವಾಗಿಯೂ, ಕಾಲ್ಪನಿಕವಾಗಿಯೂ ಇರಬಹುದು. ಮಾತೃಭಾಷೆಯಲ್ಲಿರುವ ಪುಸ್ತಕಗಳನ್ನು ಓದುವುದು ಮಕ್ಕಳಿಗೆ ಸುಲಭ. ಅಂತಹ ಪುಸ್ತಕಗಳು ತೆರೆದಿಡುವ ಪ್ರಪಂಚ ಹಾಗೂ ಪದಗಳು ಪುಟಗಳಲ್ಲಿ ಕಲ್ಪನೆಗಳು ಜೀವಂತವಾಗಿ ಗರಿಗೆದರುವಂತೆ ಮಾಡುತ್ತದೆ.

ಗ್ರಂಥಾಲಯಗಳು, ಶಿಕ್ಷಕರೊಂದಿಗಿನ ಸಂವಹನ ಮತ್ತು ಪ್ರತಿಕ್ರಿಯೆಯ ಆಧಾರದ ಮೇಲೆ, ಈ ವರ್ಷ ಕಂಟೆಂಟ್ ತಂಡವು ***ಲ್ಯಾಂಗ್ವೇಜ್ ಫರ್ಸ್ಟ್*** ಚಿತ್ರಪುಸ್ತಕಗಳು, ಪದರಹಿತ ಪುಸ್ತಕಗಳು, ಹೆಣ್ಣುಮಕ್ಕಳ ಸಬಲೀಕರಣದ ಪುಸ್ತಕಗಳು, ಸಾಮಾಜಿಕ, ಭಾವನಾತ್ಮಕ ಕಲಿಕೆ ಮತ್ತು ಹೆಚ್ಚು ರೀಡ್ ಅಲೌಡ್‌ಗಳನ್ನು ಸೃಷ್ಟಿಸಲು, ಪ್ರಕಟಿಸಲು ಒಂದು ಯೋಜನೆಯನ್ನು ಅಭಿವೃದ್ಧಿಪಡಿಸಿತು.

ಕಳೆದ ವರ್ಷ ಕಂಟೆಂಟ್ ತಂಡವು ಕೈಗೊಂಡ *Read With Me* (ನನ್ನೊಂದಿಗೆ ಓದಿ) ಎಂಬ ಪರಿಶೋಧನಾತ್ಮಕ ಅಧ್ಯಯನವು, ಗಟ್ಟಿಯಾಗಿ ಓದುವ (ರೀಡ್ ಅಲೌಡ್) ಪುಸ್ತಕಗಳು ಮತ್ತು ಮಾತೃಭಾಷೆಯ ಪುಸ್ತಕಗಳ ಅಗತ್ಯವನ್ನು ಎತ್ತಿ ತೋರಿಸಿತು. ಭಾರತೀಯ ನರ್ಸರಿ ಪದ್ಯಗಳ ಪ್ರಪಂಚವನ್ನು ಆಳವಾಗಿ ಗಮನಿಸಿದ ನಂತರ ತಂಡವು ವಿಶಿಷ್ಟವಾಗಿ ರೂಪಿಸಿದ್ದು; ಹತ್ತು ನರ್ಸರಿ ಪದ್ಯಗಳ ಪೋಸ್ಟರನ್ನು. ಕನ್ನಡ, ಮರಾಠಿ, ಗುಜರಾತಿ, ತಮಿಳು, ಮೈತೆಯಿ, ಮಲಯಾಳಂ, ಕೊಂಕಣಿ, ಕೋರಾ, ಅಸ್ಸಾಮಿ ಹಾಗೂ ಬಂಗಾಳಿಯಲ್ಲಿ. ***ಲ್ಯಾಂಗ್ವೇಜ್ ಫರ್ಸ್ಟ್*** ಪುಸ್ತಕದ ಮತ್ತೊಂದು ವೈಶಿಷ್ಟ್ಯಕ್ಕೆ ಒಂದು ಉದಾಹರಣೆ– ಲವ್ಲೀನ್ ಮಿಶ್ರಾ ಬರೆದಿರುವ **कैसे भगायें बुखार?** (ಓಡಿಸೋದು ಹೇಗಪ್ಪ ಈ ಜ್ವರ?). ಈ ಕತೆಯಲ್ಲೊಂದು ಅದ್ಭುತ ತಿರುವಿದೆ. ಪುಸ್ತಕಕ್ಕೆ ಪ್ರಿಯಾ ಕುರಿಯನ್ ಚಿತ್ರಗಳನ್ನು ಬಿಡಿಸಿದ್ದಾರೆ. ಎಂದಿನಂತೆ ತಂಡವು ಅದ್ಭುತ ಸೃಜನಶೀಲ ಗುಂಪಿನೊಂದಿಗೆ ಸೇರಿ, ಕತೆಗೆ ಹೊಂದುವಂತಹ ಸೂಕ್ತ ಪದಗಳು, ಚಿತ್ರಗಳೊಂದಿಗೆ ಹಲವಾರು ಹೊಸ ಪುಸ್ತಕಗಳನ್ನು ಸೃಷ್ಟಿಸಿತು.

ಓಗಿನ್ ನಯಂ ಅವರ *When the Sun Sets* (ಭಾನು ಮನೆಗೆ ಹೋದಾಗ) ಪದರಹಿತ ಅದ್ಭುತ ಪುಸ್ತಕವಾಗಿದ್ದು ಇದರಲ್ಲಿ ಭಾನು ತನ್ನ ಬದುಕಿನ ಬಗ್ಗೆ ತಿಳಿಯಲು ಓದುಗರನ್ನು ತಾನು ಮುಳುಗಿದ ಮೇಲೆ ತನ್ನ ಮನೆಗೆ ಬನ್ನಿ ಎಂದು ಆಹ್ವಾನಿಸುತ್ತಾಳೆ.

ಮಕ್ಕಳು ತಮ್ಮನ್ನು ಗಮನಿಸಬೇಕು, ಅರ್ಥ ಮಾಡಿಕೊಳ್ಳಬೇಕು ಎಂದು ಹಂಬಲಿಸುತ್ತಾರೆ. ಕತೆಗಳು ನಿಭಾಯಿಸಲು ಕಷ್ಟಕರವಾದ ಭಾವನೆಗಳನ್ನು ಎದುರಿಸುವಲ್ಲಿ ಅವರಿಗೆ ಸಹಾಯ ಮಾಡುತ್ತವೆ. ನಮ್ಮ ಬಳಕೆದಾರರ ಮನವಿ (ಕ್ಷೇತ್ರವಾರು ಭೇಟಿಗಳಿಂದ ಸಂಗ್ರಹಿತ ಮರುಮಾಹಿತಿ) ಮೇರೆಗೆ ರೂಪಿಸಿದ ಎರಡು ಪುಸ್ತಕಗಳೆಂದರೆ ಮಾತಂಗಿ ಸುಬ್ರಹ್ಮಣ್ಯನ್ ಬರೆದ, ಪ್ರೊಯಿತಿ ರಾಯ್ ಚಿತ್ರಗಳನ್ನು ರಚಿಸಿರುವ *Full of Light* (ಬೆಳಕೋ ಬೆಳಕು) ಮತ್ತು ಯಾಮಿನಿ ವಿಜಯನ್ ಬರೆದ, ಐಂದ್ರಿ ಸಿ ಚಿತ್ರಗಳನ್ನು ರಚಿಸಿರುವ *The Growing Up Book* (ಬೆಳೆಯುವುದೆಂದರೆ...) ಕತೆ. *Full of Light* (ಬೆಳಕೋ ಬೆಳಕು) ಪೋಷಕರಿಂದ ಉಂಟಾಗುವ ಭಾವನಾತ್ಮಕ ದೌರ್ಜನ್ಯದ ಮೇಲೆ ಬೆಳಕು ಚೆಲ್ಲುತ್ತದೆ. ಈ ವಿಷಯದ ಬಗ್ಗೆ ಚರ್ಚಿಸುವುದೇ ವಿರಳ. *The Growing Up Book* (ಬೆಳೆಯುವುದೆಂದರೆ...) ಪುಸ್ತಕವು ಯುವ ಓದುಗರಿಗೆ ಸಂಕೀರ್ಣವಾದ ಪ್ರೌಢಾವಸ್ಥೆಯ ಬಗ್ಗೆ ಆಕರ್ಷಕ ರೀತಿಯಲ್ಲಿ ಮಾಹಿತಿ ನೀಡಿ, ಅವರನ್ನು ಆ ಹಂತಕ್ಕೆ ಸಿದ್ಧಗೊಳಿಸುತ್ತದೆ.

ಪರಿಸರ ಅಥವಾ ಪರಸ್ಪರರ ಜೊತೆ ಶಾಶ್ವತ ಸಂಬಂಧಗಳನ್ನು ರೂಪಿಸಿಕೊಳ್ಳುವುದು ಬಾಲ್ಯದ ಅನುಭವಗಳ ಅತ್ಯಗತ್ಯ ಭಾಗವಾಗಿದೆ. ಶಬ್ನಮ್ ಮಿನ್ವಾಲ ಬರೆದ, ಪ್ರಿನ್ಸಿ ರಾವತ್ ಚಿತ್ರಗಳನ್ನು ರಚಿಸಿರುವ *It's Not Fair* (ಚಿಟ್ಟಿ, ಫ್ರೆಂಡ್ಶಿಪ್ ಬಿಟ್ಟೆ) ಅಸೂಯೆ ಮತ್ತು ಸ್ನೇಹದ ಬಗೆಗಿನ ಕತೆ. ನೆನಪು, ಸಂಬಂಧಗಳ ನವಿರು ನಿರೂಪಣೆಯ ಕತೆ *Forgetful Dida* (ಮರೆಗುಳಿ ದೀದಾ) ಹಿಮಾಂಜಲಿ ಶಂಕರ್ ಈ ಕತೆಯನ್ನು ಬರೆದಿದ್ದು, ಅದಿತಿ ಆನಂದ್ ಚಿತ್ರಗಳನ್ನು ರಚಿಸಿದ್ದಾರೆ. ಇದು ಮೂರು ತಲೆಮಾರಿನ ಹೆಣ್ಣುಮಕ್ಕಳ ಕತೆಯಾಗಿದ್ದು, ಇದರಲ್ಲಿ ಒಬ್ಬರು ಅಲ್ಝೈಮರ್‌ನಿಂದ ಬಳಲುತ್ತಿರುತ್ತಾಳೆ.

The Tortoiseshell Beetle (ಆಮೆ ಚಿಪ್ಪಿನ ಜೀರುಂಡೆ) ಯುವಾನ್ ಏವ್ಸ್ ಬರೆದ ಕತೆಗೆ ರೇಶು ಸಿಂಗ್ ಚಿತ್ರಗಳನ್ನು ಬಿಡಿಸಿದ್ದಾರೆ. ಇದು ಹುಡುಗನೊಬ್ಬ ಪ್ರಕೃತಿಯಲ್ಲಿ

ತನ್ನಷ್ಟಕ್ಕೆ ತಾನು ಕಲಿಕೆಯ ದಾರಿಯನ್ನು ಕಂಡುಕೊಂಡ ಕತೆ. ನಾಸಾದವರು ಹಲವಾರು ವರ್ಷಗಳಿಂದ ತೆಗೆದಿರುವ ಬಾಹ್ಯಾಕಾಶದ ಚಿತ್ರಗಳು ಅಪರ್ಣಾ ಕಪೂರ್ ಮತ್ತು ಬಿಜಲ್ ವಚ್ಚರಜನಿ ಅವರಿಗೆ *Space Rules* (ಅಂತರಿಕ್ಷ ನಿಯಮಗಳು) ಕತೆ ಬರೆಯಲು ಪ್ರೇರೇಪಿಸಿತು. ಇದು ಬಾಹ್ಯಾಕಾಶದಲ್ಲಿ ಪಯಣಿಸುವಾಗಿನ ಮುನ್ನೆಚ್ಚರಿಕೆ ಕ್ರಮಗಳ ಕುರಿತಾದ ಕೈಪಿಡಿ. ಇದಕ್ಕೆ ಕನಾಟೊ ಜಿಮೊ ಚಿತ್ರ ಬಿಡಿಸಿದ್ದಾರೆ.

ಈ ವರ್ಷ ಬಂದ ಕೆಲವು ಮುಖ್ಯ ಪುಸ್ತಕಗಳ ವಿಷಯ ಸಮುದಾಯ ಮತ್ತು ಸ್ನೇಹ. ಸೌಮ್ಯಾ ರಾಜೇಂದ್ರನ್ ಬರೆದ *The Worst Best Friends* (ಲೀಲಾ ಮತ್ತವಳ ಬೆಕ್ಕು) ಕತೆಯು ನಾವು ಯಾರೆಂದು ತಿಳಿಯಪಡಿಸುವ ಸ್ನೇಹಗಳ ಕುರಿತಾದ ಕತೆ. ಇದಕ್ಕೆ ಪಾರ್ವತಿ ಸುಬ್ರಹ್ಮಣ್ಯನ್ ಚಿತ್ರಗಳನ್ನು ಬಿಡಿಸಿದ್ದಾರೆ. ಮೇನಕಾ ರಾಮನ್ ಬರೆದ *The Freedom Sisters* (ಸ್ವತಂತ್ರ ಸೋದರಿಯರು) ಕತೆಗೆ ಕೃತಿಕಾ ಸೂಸರ್ಲ ಚಿತ್ರಗಳನ್ನು ಬಿಡಿಸಿದ್ದಾರೆ. ಇದೊಂದು ಹಾಸ್ಯಭರಿತ ಆಪ್ತಕತೆಯಾಗಿದ್ದು ಪಯೋಶಿನಿ ತನ್ನಿಷ್ಟದ ಸಂಗೀತ ಕಲಿಯುತ್ತಾಳೆ.

ಪ್ರಥಮ್ ಬುಕ್ಸ್ ಕಳೆದ 20 ವರ್ಷಗಳಲ್ಲಿ ಅಭಿವೃದ್ಧಿಪಡಿಸಿರುವ ವಿಸ್ತಾರವಾದ ಕ್ಯಾಟಲಾಗ್, ಪದ ಹಾಗೂ ಚಿತ್ರಗಳ ಮೂಲಕ ಹೇಳಲಾಗುವ ಕತೆಗಳ ನಿಧಿಯಾಗಿದೆ. ವೇಗವಾಗಿ ಬದಲಾಗುತ್ತಿರುವ ಜಗತ್ತಿನೊಂದಿಗೆ ಹೆಜ್ಜೆ ಹಾಕಲು ಕ್ಯಾಟಲಾಗ್ ಮರುಪರಿಶೀಲಿಸಿ, ಕೆಲವು ಆರಂಭಿಕ ಹಂತದ ಪುಸ್ತಕಗಳ ಚಿತ್ರಗಳನ್ನು ಈಗಿನ ಓದುಗರಿಗೆ ಹತ್ತಿರವಾಗುವಂತೆ ಮರುಚಿತ್ರಿಸುವುದು ಮುಖ್ಯ ಎಂದು ತಂಡವು ಭಾವಿಸಿತು. ಇವುಗಳಲ್ಲಿ ಕೆಲವು ***मेरा घर*** (ನಮ್ಮ ಮನೆ) ಮತ್ತು ***मेरे दोस्त*** (ನನ್ನ ಗೆಳೆಯರು) ಈ ಕತೆಯನ್ನು ಬರೆದಿದ್ದು ರುಕ್ಮಿಣಿ ಬ್ಯಾನರ್ಜಿ, ಚಿತ್ರಗಳನ್ನು ಬರೆದಿರುವುದು ಬಾಬಾಕಿಕಿ; My Sister and Me (ನಾನು, ನನ್ನಕ್ಕ) ಕಾಂಚನ್ ಬ್ಯಾನರ್ಜಿ, ಚಿತ್ರಗಳನ್ನು ಬರೆದವರು ಕಬಿನಿ ಅಮಿನ್; ಮೀರಾ ತೆಂಡೂಲ್ಕರ್ ಬರೆದಿರುವ **माझी बॅट हरवली, माझी बॅट सापडली** (ಓ... ನನ್ನ ಬ್ಯಾಟ್ ಎಲ್ಲಿ?) ಕತೆಗೆ ಪಲ್ಲವಿ ಸಿನ್ಹಾ ಚಿತ್ರಗಳನ್ನು ಬರೆದಿದ್ದಾರೆ; ಸಂಜೀವ್ ಜೈಸ್ವಾಲ್ ಬರೆದಿರುವ **बरसा बादल** (ಮಳೆರಾಯ) ಕತೆಗೆ ತಸ್ನೀಮ್ ಅಮಿರುದ್ದೀನ್ ಚಿತ್ರಗಳನ್ನು ಬರೆದಿದ್ದಾರೆ.

ಪ್ರಥಮ್ ಬುಕ್ಸ್ ಮತ್ತು ಸಿಂಗಾಪುರ್ ಬುಕ್ ಕೌನ್ಸಿಲ್ ಏಷ್ಯನ್ ಫೆಸ್ಟಿವಲ್ ಆಫ್ ಚಿಲ್ಡ್ರನ್ಸ್ ಕಂಟೆಂಟ್ (AFCC) ಬಿಲ್ಡ್ ಯುವರ್ ಹ್ಯಾಕಥಾನ್ ಈ ವರ್ಷವೂ ಯಶಸ್ವಿಯಾಯಿತು. ಈ ವರ್ಚುಯಲ್ ಹ್ಯಾಕಥಾನ್‌ನಲ್ಲಿ ಭಾರತ, ನೇಪಾಳ, ಸಿಂಗಾಪುರ, ಥೈಲ್ಯಾಂಡ್, ಮಲೇಷ್ಯಾ ಮತ್ತು ಆಸ್ಟ್ರೇಲಿಯಾದಿಂದ ಆಸಕ್ತರು ಪಾಲ್ಗೊಂಡಿದ್ದರು. ಎರಡು ದಿನಗಳಲ್ಲಿ ಆರು ಚಿತ್ರಕಾರರ ನೇತೃತ್ವದಲ್ಲಿ ಐದು ಭಾಷೆಗಳಲ್ಲಿ (ಹಿಂದಿ, ತಮಿಳು, ಚೈನೀಸ್, ವಿಯೆಟ್ನಾಮೀಸ್ ಮತ್ತು ಮಲಯ) ಒಟ್ಟು 36 ಪುಸ್ತಕಗಳನ್ನು ರಚಿಸಲಾಯಿತು! ಅಚ್ಚರಿ, ಕುತೂಹಲ ಮತ್ತು ವೈವಿಧ್ಯತೆ – ಹೀಗೆ ಪ್ರತಿ ಪುಸ್ತಕವೂ ನಾವು ಎತ್ತಿಹಿಡಿವ ಐಡಿಯಾಗಳನ್ನು ಒಳಗೊಂಡಿತ್ತು.

ಪ್ರತಿಷ್ಠಿತ ನ್ಯಾಷನಲ್ ಗ್ಯಾಲರಿ ಸಿಂಗಾಪುರ ಮತ್ತು ಸಿಂಗಾಪುರ್ ಆರ್ಟ್ ಮ್ಯೂಸಿಯಂನವರಿಗೆ ವೈವಿಧ್ಯತೆ ಮಾರ್ಗದರ್ಶಿ 'ಡೈವರ್ಸಿಟಿ ಗೈಡ್: ದ ವರ್ಲ್ಡ್ ವಿ ಲಿವ್ ಇನ್, ದ ವರ್ಡ್ಸ್ ವಿ ಕ್ರಿಯೇಟ್' ಆಧರಿಸಿದ ವರ್ಚುವಲ್ ಭಾಷಣವನ್ನು ನೀಡಲು ತಂಡವನ್ನು ಆಹ್ವಾನಿಸಲಾಗಿತ್ತು. ಇಲ್ಲಿ ನಮ್ಮ ತಂಡವು AFCC ಸಿಂಗಾಪುರದಲ್ಲಿ ಪದರಹಿತ ಪುಸ್ತಕಗಳು ಮತ್ತು ವೈವಿಧ್ಯತೆಯ ಕುರಿತು ಪ್ರಬಂಧಗಳನ್ನು ಮಂಡಿಸಿತು.

ತಂಡವು ATREE ಉದ್ಯೋಗಿಗಳು ಮತ್ತು ಸೃಷ್ಟಿ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಮತ್ತು ಟೆಕ್ನಾಲಜಿಯ ವಿದ್ಯಾರ್ಥಿಗಳೊಂದಿಗೆ ಚಿತ್ರಪುಸ್ತಕ ತಯಾರಿಕೆಯ ಹಲವು ಅಂಶಗಳ ಕುರಿತು ಸಂವಾದ ನಡೆಸಿತು.

ಸಂಪಾದಕರಾದ ಶಿನಿಬಾಲಿ ಮಿತ್ರಾ ಸೈಗಲ್ ಮತ್ತು ರಾಧಿಕಾ ಶೆಣೈ ಅವರು ಜೀವನ ಚರಿತ್ರೆಗಳ ಮಹತ್ವದ ಕುರಿತು NISSEMಗಾಗಿ ಒಟ್ಟಾಗಿ ಪ್ರಬಂಧವನ್ನು ಬರೆದಿದ್ದಾರೆ.



ಚಿತ್ರ 1: *ನೀವ್ ಬುಕ್ ಪ್ರಶಸ್ತಿ ವಿಜೇತರೊಂದಿಗೆ ಪ್ರಥಮ್ ಬುಕ್ಸ್ ಸದಸ್ಯರು, ಸದಾಫ್ ಸಿದ್ಧಿಕಿ ಮತ್ತು ಹಬೀಬ್ ಅಲಿ.*

ಚಿತ್ರ 2: *ATREE ಬೆಂಗಳೂರಿನ ಕಾರ್ಯಾಗಾರದಲ್ಲಿ ಪ್ರಥಮ್ ಬುಕ್ಸ್ ಕಂಟೆಂಟ್ ತಂಡ.*

ಚಿತ್ರ 3: *2023ರ ಏಷ್ಯನ್ ಫೆಸ್ಟಿವಲ್ ಆಫ್ ಚಿಲ್ಡ್ರನ್ಸ್ ಕಂಟೆಂಟ್‌ನಿಂದ ಸಂಪಾದಕಿ ಸ್ಮಿತ್ ಜವೇರಿ ಮತ್ತು ಕಲಾ ನಿರ್ದೇಶಕ ಕನಾಟೊ ಜಿಮೊ ಅವರ ಸ್ಕೆಚ್‌ಬುಕ್.*

ಚಿತ್ರ 4: *ಬೂಕರೂ ಬರೋಡಾದಲ್ಲಿ ಕಲಾ ನಿರ್ದೇಶಕ ಮತ್ತು ಪ್ರಶಸ್ತಿ ವಿಜೇತ ಚಿತ್ರಕಾರ, ಕನಾಟೊ ಜಿಮೊ.*

ಚಿತ್ರ 5: *ಪ್ರಿಯಾ ಕುರಿಯನ್ Beauty Is Missing (ಸುಂದರಿ ಕಾಣೆಯಾಗಿದ್ದಾಳೆ)ಗಾಗಿ ಬಿನೋದ್ ಕನೋರಿಯಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.*

ಚಿತ್ರ 6: *ಸೃಷ್ಟಿ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಅಂಡ್ ಟೆಕ್ನಾಲಜಿ ಸಂಸ್ಥೆಯ ವಿದ್ಯಾರ್ಥಿಗಳೊಂದಿಗೆ ಚಿತ್ರಪುಸ್ತಕ ತಯಾರಿಕೆಯ ಕಾರ್ಯಾಗಾರ.*

ಪ್ರಶಸ್ತಿಗಳು

ಸುಂದರಿ ಕಾಣೆಯಾಗಿದ್ದಾಳೆ

ಮೆಕ್ಲಿ ಗೋಭಾಯ್ ಮಕ್ಕಳ ಪುಸ್ತಕ ಇಲ್ಲಸ್ಟ್ರೇಟರ್ ಆಫ್ ದಿ ಇಯರ್ 2023

FICCI ಇಂಡಿಯಾ ಪಬ್ಲಿಷಿಂಗ್ ಪ್ರಶಸ್ತಿಗಳು, ವರ್ಷದ ಮಕ್ಕಳ ಪುಸ್ತಕ

ನಮ್ಮ ಮನೆ ಎಂದರೆ

ಆಟ ಗಲಾಟ–ಬೆಂಗಳೂರು ಸಾಹಿತ್ಯೋತ್ಸವ 2023: ಅತ್ಯುತ್ತಮ ಮಕ್ಕಳ ಚಿತ್ರಕತೆ ಪುಸ್ತಕ

ನಮ್ಮ ಸುಂದರ ಜಗತ್ತು

ಪಬ್ಲಿಷಿಂಗ್ ನೆಕ್ಸ್ಟ್ ಇಂಡಸ್ಟ್ರಿ ಅವಾರ್ಡ್ಸ್ 2023: ವರ್ಷದ ಮಕ್ಕಳ ಪುಸ್ತಕ: 8+ ವಿಜೇತರು

ಪ್ರಶಸ್ತಿಗಳು

ಹಲೋ, ಸೂರ್ಯ!

ಶ್ರೇಷ್ಠ ಪುಸ್ತಕ ನಿರ್ಮಾಣಕ್ಕಾಗಿ ಭಾರತೀಯ ಪ್ರಕಾಶಕರ ಒಕ್ಕೂಟದ ಪ್ರಶಸ್ತಿಗಳು 2023: ಮಕ್ಕಳ ಪುಸ್ತಕಗಳು, ಸಾಮಾನ್ಯ ಆಸಕ್ತಿ, 0-10 ವರ್ಷಗಳು, ಪ್ರಾದೇಶಿಕ ಭಾಷೆಗಳು - ತಮಿಳು: ಎರಡನೇ ಬಹುಮಾನ

ನನ್ನ ಓಣಿ

ನೀವ್ ಪುಸ್ತಕ ಬಹುಮಾನ: ಆರಂಭಿಕ ಓದುಗರು

ನನ್ನಜ್ಜಿಯ ಕೈಚಳಕ

ರೂಮ್ ಟು ರೀಡ್ ಮಕ್ಕಳ ಸಾಹಿತ್ಯ ಪ್ರಶಸ್ತಿಗಳು 2023: ಶಿಕ್ಷಕ-ಗ್ರಂಥಪಾಲಕರ ಆಯ್ಕೆ ಪ್ರಶಸ್ತಿ (3-8 ವರ್ಷಗಳು): ರನ್ನರ್ ಅಪ್

ಪ್ರಶಸ್ತಿಗಳು

ಗಪ್ಪು ಗೋಲಾ

ರೂಮ್ ಟು ರೀಡ್ ಮಕ್ಕಳ ಸಾಹಿತ್ಯ ಪ್ರಶಸ್ತಿಗಳು 2023: ವರ್ಷದ ಚಿತ್ರಪುಸ್ತಕ

ಪುಕ್ಕಟೆ ಕುಲ್ಫಿ

ರೂಮ್ ಟು ರೀಡ್ ಮಕ್ಕಳ ಸಾಹಿತ್ಯ ಪ್ರಶಸ್ತಿಗಳು 2023: ವರ್ಷದ ಯುವ ಲೇಖಕಿ ರನ್ನರ್ ಅಪ್

ಕೆಂಪು ಕಿನ್ನರಿ

ರೂಮ್ ಟು ರೀಡ್ ಮಕ್ಕಳ ಸಾಹಿತ್ಯ ಪ್ರಶಸ್ತಿಗಳು 2023: ಶಿಕ್ಷಕ-ಗ್ರಂಥಪಾಲಕರ ಆಯ್ಕೆ ಪ್ರಶಸ್ತಿಗಳು (8-12 ವರ್ಷಗಳು): ರನ್ನರ್ ಅಪ್

ಕಹಾನಿ, ಕಥಾ, ಕಹಾನಿ, ಕಿಸ್ಸಾ ಇತ್ಯಾದಿ

580+
ಪುಸ್ತಕಗಳು ಅನುವಾದಗೊಂಡಿವೆ

11+
ಭಾಷೆಗಳು

4+
ಲ್ಯಾಂಗ್ವೇಜ್ ಫರ್ಸ್ಟ್ ಪುಸ್ತಕಗಳು

ಬಹುಭಾಷಾ ಪ್ರಕಾಶರಾಗಿ, ಭಾರತೀಯ ಮಕ್ಕಳ ಪ್ರಕಾಶನ ವ್ಯವಸ್ಥೆಯನ್ನು ಉತ್ತಮಗೊಳಿಸುವಲ್ಲಿ ನಾವು ಸಮರ್ಥವಾಗಿದ್ದೇವೆ. ಈ ವರ್ಷ ನಮ್ಮ ಕ್ಯಾಟಲಾಗ್‌ಗೆ ಇನ್ನಷ್ಟು ಹೆಚ್ಚಿನ ಭಾಷೆಗಳನ್ನು ಸೇರಿಸಿಕೊಂಡಿದ್ದೇವೆ. ನಮ್ಮ ಅನುವಾದಗಳಿಗೆ ಬೇರೆ ಬೇರೆ ಹಣಕಾಸಿನ ಮೂಲಗಳನ್ನು ಹುಡುಕಿಕೊಂಡಿದ್ದೇವೆ. ***ಲ್ಯಾಂಗ್ವೇಜ್ ಫರ್ಸ್ಟ್*** ಪುಸ್ತಕ ಸರಣಿಯಲ್ಲಿ ಹಲವಾರು ಪುಸ್ತಕಗಳನ್ನು ರೂಪಿಸಿದ್ದೇವೆ. ಜೊತೆಗೆ ಭಾರತೀಯ ಭಾಷೆಗಳ ನಡುವೆ ಅನುವಾದಗಳನ್ನು ಮಾಡಿದ್ದೇವೆ.

ಫಿಡಿಲಿಟಿ ಯೋಜನೆಗಾಗಿ 11 ಭಾಷೆಗಳಲ್ಲಿ ಒಟ್ಟು 500 ಪುಸ್ತಕಗಳನ್ನು ರಚಿಸಲಾಗಿದೆ. ಇದು ಕಾಶ್ಮೀರಿ, ನೇಪಾಳಿ, ಬೊಡೊ, ಅಸ್ಸಾಮಿ, ಉರ್ದು ಮತ್ತು ಮಣಿಪುರಿ ಭಾಷೆಗಳನ್ನು ಒಳಗೊಂಡಿದೆ. ತಂಡವು ನಿರಂತರವಾಗಿ ಅನುವಾದಕರೊಂದಿಗೆ ಅನುವಾದದ ತಾಂತ್ರಿಕ ಹಾಗೂ ಸೃಜನಶೀಲ ಅಂಶಗಳ ಬಗ್ಗೆ ಆನ್‌ಲೈನ್ ಚರ್ಚೆಗಳನ್ನು ನಡೆಸಿ ಎಲ್ಲ ಭಾಷೆಗಳಲ್ಲಿ ಉತ್ತಮ ಗುಣಮಟ್ಟದ ಅನುವಾದವನ್ನು ಸಾಧಿಸಿತು.

ಗೊಂಡಿ ಭಾರತದ ಏಳು ರಾಜ್ಯಗಳಲ್ಲಿ 2.7 ದಶಲಕ್ಷಕ್ಕೂ ಹೆಚ್ಚು ಜನರು ಮಾತನಾಡುವ ಸ್ಥಳೀಯ ಭಾಷೆಯಾಗಿದೆ. ಗೊಂಡಿ ಭಾಷೆಯ ಚಿತ್ರಪುಸ್ತಕಗಳು ಗೊಂಡಿ ಮಾತನಾಡುವ ಮಕ್ಕಳು ಓದುವ ಆನಂದವನ್ನು ಅನುಭವಿಸಲು ಸಹಾಯ ಮಾಡುತ್ತವೆ. ಅವರಿಗೆ ಶಾಲೆಯಲ್ಲಿನ ಭಾಷೆಗಳ ಕಲಿಕೆಯನ್ನು ಸುಲಭಗೊಳಿಸುತ್ತವೆ. ಛತ್ತೀಸ್‌ಗಢದ ಸುಕ್ಮಾದಲ್ಲಿನ ಸಂಘರ್ಷ (ಗಲಭೆ) ಪೀಡಿತ ಪ್ರದೇಶಗಳ ಮಕ್ಕಳನ್ನು ತಲುಪುವ ಸಲುವಾಗಿ 100 ಗೊಂಡಿ ಪುಸ್ತಕಗಳನ್ನು ರೂಪಿಸಲು ನಾವು ಶಿಕ್ಷಾರ್ಥ ಟ್ರಸ್ಟ್‌ನೊಂದಿಗೆ ಕೆಲಸ ಮಾಡಿದ್ದೇವೆ.

ಈಶಾನ್ಯ ರಾಜ್ಯಗಳಿಗಾಗಿ ಚಿತ್ರಪುಸ್ತಕಗಳನ್ನು ರಚಿಸುವ ನಮ್ಮ ಧ್ಯೇಯದ ಭಾಗವಾಗಿ, 20 ಪುಸ್ತಕಗಳನ್ನು-ಅವುಗಳಲ್ಲಿ ಹೆಚ್ಚಿನವು ಈಶಾನ್ಯ ರಾಜ್ಯಗಳ ಲೇಖಕರು ಮತ್ತು ಚಿತ್ರಕಾರರೇ ಬರೆದಿದ್ದು-ಅಸ್ಸಾಮಿ ಭಾಷೆಗೆ ಅನುವಾದಿಸಲಾಯಿತು. ಈ ಯೋಜನೆಗೆ ಎಚ್ ಟಿ ಪಾರೇಖ್ ಫೌಂಡೇಶನ್‌ನಿಂದ ಹಣಕಾಸು ನೆರವು ನೀಡಲಾಗಿದ್ದು, ರಾಷ್ಟ್ರೀಯ ಅನುವಾದ ಮಿಷನ್ ಸಹಯೋಗದೊಂದಿಗೆ ಇದನ್ನು ಕೈಗೊಳ್ಳಲಾಗಿದೆ.

ಐದು ಸ್ಟೋರಿ ಕಾರ್ಡ್‌ಗಳನ್ನು ಅಕಾ ಹುಸ್ಸೋ ಮತ್ತು ಸಿಂಗ್‌ಪೋ ಭಾಷೆಗಳಿಗೆ ಅನುವಾದಿಸಲಾಯಿತು. ಇವೆರಡೂ ಅಳಿವಿನಂಚಿನಲ್ಲಿರುವ

ಭಾಷೆಗಳು. ಸಮುದಾಯದ ಸದಸ್ಯರು ಅನುವಾದಕರಾಗಿ, ವಿಮರ್ಶಕರಾಗಿ ಸೇವೆ ಸಲ್ಲಿಸಿದರು. ಬರಹಗಾರ್ತಿ ನಬನಿತಾ ದೇಶಮುಖ್ ಈ ಯೋಜನೆಯನ್ನು ಸಂಯೋಜಿಸಿದರು.

ಹೆಚ್ಚಿನ ಅನುವಾದಗಳನ್ನು ಸೃಜಿಸುವ ನಮ್ಮ ಪ್ರಯತ್ನದ ಭಾಗವಾಗಿ, ಮೊದಲ ಬಾರಿಗೆ ನಾವು ಆಯ್ದ ಈಶಾನ್ಯ ಭಾಷೆಗಳಿಗೆ ಪುಸ್ತಕಗಳನ್ನು ಭಾಷಾಂತರಿಸಲು ಕ್ರೌಡ್‌ಫಂಡಿಂಗ್ ಅಭಿಯಾನವನ್ನು ನಡೆಸಿದೆವು. ಹದಿಹರೆಯಕ್ಕೆ ಕಾಲಿಟ್ಟ ಮಕ್ಕಳು ತಮ್ಮ ದೇಹದ ಬಗ್ಗೆ ಕೇಳುವ ಪ್ರಶ್ನೆಗಳಿಗೆ ಉತ್ತರ ಒದಗಿಸುವಂತಹ *The Growing Up Book* ಮತ್ತು ಕುಟುಂಬದಲ್ಲಿನ ಲಿಂಗತ್ವದ ಧೋರಣೆಗಳನ್ನು ಬುಡಮೇಲು ಮಾಡುವ ತಮಾಷೆಯಾದ ಕತೆ ಹೊಂದಿರುವ साड़ी में बाबा ಪುಸ್ತಕವನ್ನು ಅಸ್ಸಾಮಿ ಮತ್ತು ಬೋಡೋ ಭಾಷೆಗಳಿಗೆ ಅನುವಾದಿಸಲಾಯಿತು.

ಮಕ್ಕಳು ಮಾತೃಭಾಷೆಯಲ್ಲಿ ಪುಸ್ತಕಗಳನ್ನು ಓದುವ ಮೂಲಕ ಪಡೆಯುವ ಆನಂದವು ಅವರಲ್ಲಿ ಪುಸ್ತಕ ಪ್ರೀತಿಯನ್ನು ಬೆಳೆಸುತ್ತದೆ. ಇದು ಅವರ ಓದುವ, ಗ್ರಹಿಸುವ ಕೌಶಲಗಳನ್ನು ಹೆಚ್ಚಿಸುವುದರೊಂದಿಗೆ, ಶಾಲೆಯಲ್ಲಿನ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ ಎಂದು ತಿಳಿದುಬಂದಿದೆ. ಭಾರತದ ಮಕ್ಕಳ ಸಾಹಿತ್ಯದಲ್ಲಿ ಭಾರತೀಯ ಭಾಷೆಗಳಲ್ಲೇ ಒಂದರಿಂದ ಮತ್ತೊಂದಕ್ಕೆ ಪುಸ್ತಕಗಳು ಅನುವಾದವಾಗಿರುವುದು ಅಪರೂಪ. ಈ ವರ್ಷ ನಾವು ಇದನ್ನು ಸವಾಲಾಗಿ ಸ್ವೀಕರಿಸಿದೆವು. ಭಾರತೀಯ ಭಾಷೆಗಳ ಪುಸ್ತಕಗಳನ್ನು ಒಂದರಿಂದ ಮತ್ತೊಂದಕ್ಕೆ ಅನುವಾದಿಸುವ ಮೂಲಕ ಮೂಲಭಾಷೆಯ ಅನನ್ಯ ದನಿಗಳನ್ನು ಅನುರಣಿಸುವಂತೆ ಮಾಡಿದೆವು. ಈ ವರ್ಷ ಮೂಲ ಹಿಂದಿ ಪುಸ್ತಕಗಳನ್ನು ನೇರವಾಗಿ ಮರಾಠಿ, ಕನ್ನಡ, ತಮಿಳಿಗೆ ಅನುವಾದಿಸಿದೆವು.

ಸ್ಥಳೀಯ ಭಾಷೆಯ ಅನುವಾದಕ್ಕಾಗಿ ಹೆಸರಾಂತ ಹಿರಿಯ ಅನುವಾದಕರು, ಸಾಹಿತ್ಯ ಅಕಾಡೆಮಿ ವಿಜೇತರೊಂದಿಗೆ ಕೆಲಸ ಮಾಡಿದ್ದೇವೆ. ಜಯಂತ ಕಾಯ್ಕಿಣಿ ಅವರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ **एक होती इडली** (ಇಡ್ಲಿ ಇತ್ತು ಭಾರಿ) ಅಂತಹದ್ದೊಂದು ಪುಸ್ತಕ.

ಉತ್ತಮ ಗುಣಮಟ್ಟದ ಮೂಲ ಹಾಗೂ ಅನುವಾದಿತ ಪುಸ್ತಕಗಳನ್ನು ರೂಪಿಸುವಲ್ಲಿ ಒಂದೇ ಗುಣಮಟ್ಟ ಹಾಗೂ ವಿವೇಚನೆಗಳು ಬಹಳ ಮುಖ್ಯ. ನಮ್ಮ ತೆಲುಗು ಅನುವಾದಕರಿಗಾಗಿ ಆನ್‌ಲೈನ್ ಸಭೆಗಳನ್ನು ಮಂಚಿಪುಸ್ತಕಂ ಮತ್ತು ನ್ಯಾಷನಲ್ ಬುಕ್ ಟ್ರಸ್ಟ್‌ನ ಮೋಹನ್ ಪಟ್ಟಿಪಾಕ ಅವರೊಂದಿಗೆ ಆಯೋಜಿಸಲಾಯಿತು. ತೆಲುಗು ಭಾಷಾಂತರದಲ್ಲಿ ಅನುಸರಿಸಲು ಉತ್ತಮ ಅಭ್ಯಾಸಗಳ ಕೈಪಿಡಿಯೊಂದನ್ನು ಅಭಿವೃದ್ಧಿಪಡಿಸಲಾಯಿತು.

ನಮ್ಮ ಮೂಲ ಹಿಂದಿ ಪುಸ್ತಕಗಳು ಹಲವಾರು ಪ್ರಶಸ್ತಿಗಳನ್ನು ಗೆದ್ದವು. रंग बिरंगी किताब ಪುಸ್ತಕಕ್ಕಾಗಿ ಅಲಂಕೃತಾ ಅಮಾಯಾ ಅವರು ರೂಮ್ ಟು ರೀಡ್‌ನ ಉತ್ತಮ ಲೇಖಕಿ ಪ್ರಶಸ್ತಿ ಪಡೆದರು. ವಿಷ್ಣು ಎಂ ನಾಯರ್ ಅವರು गप्पू गोला ಪುಸ್ತಕಕ್ಕಾಗಿ ರೂಮ್ ಟು ರೀಡ್‌ನ ಉತ್ತಮ ಚಿತ್ರಕಾರ ಪ್ರಶಸ್ತಿ ಪಡೆದರು. निराली दादी ಪುಸ್ತಕವು ರೂಮ್ ಟು ರೀಡ್‌ನ ಲೈಬ್ರರಿಯನ್ ಚಾಯ್ಸ್ ಪ್ರಶಸ್ತಿ ಪಡೆದಿದೆ.

ನಾವು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಹಲವಾರು ಚರ್ಚಾ ವೇದಿಕೆಗಳಲ್ಲಿ ಭಾಗಿಯಾದೆವು. ಇವುಗಳಲ್ಲಿ NCERT ಆಯೋಜಿಸಿದ್ದ 'ರಾಷ್ಟ್ರೀಯ ಪುಸ್ತಕ ಪ್ರಚಾರಕ್ಕಾಗಿ ಅಭಿವೃದ್ಧಿ ಮಾರ್ಗಸೂಚಿಗಳು' ಕಾರ್ಯಾಗಾರ; ಪುಣೆಯಲ್ಲಿ ಭಾಷಾ ಫೌಂಡೇಶನ್ ಆಯೋಜಿಸಿದ್ದ ಸಾಹಿತ್ಯ ಉತ್ಸವ; ಕ್ರೈಸ್ಟ್ ವಿಶ್ವವಿದ್ಯಾಲಯ ಮತ್ತು CIIL ಆಯೋಜಿಸಿದ್ದ ರಾಷ್ಟ್ರೀಯ ಅನುವಾದ ವಿಚಾರ ಸಂಕಿರಣ; ಮತ್ತು ಕನ್ನಡ ದಿನಪತ್ರಿಕೆ ವಿಜಯ ಕರ್ನಾಟಕ ಆಯೋಜಿಸಿದ್ದ ಕನ್ನಡದಲ್ಲಿ ಮಕ್ಕಳ ಪುಸ್ತಕಗಳ ಕುರಿತ ಚರ್ಚೆ ಇವೆಲ್ಲವೂ ಸೇರಿದೆ.

ಪ್ರಥಮ್ ಬುಕ್ಸ್ ಪುಸ್ತಕಗಳನ್ನು ನಮ್ಮ ಶಾಲೆಯ ಮಕ್ಕಳು ತುಂಬಾ ಇಷ್ಟಪಟ್ಟರು. ಈ ಪುಸ್ತಕಗಳು ನಮ್ಮ ಓದುವ ಸಮಯವನ್ನು ಆಸಕ್ತಿದಾಯಕವಾಗಿಸಿವೆ. ನಮ್ಮ ಶಾಲೆಯ ಮಕ್ಕಳಿಗೆ ಹಿಂದಿ ಚಿತ್ರಪುಸ್ತಕಗಳ ಜಗತ್ತು ತುಂಬಾ ಹೊಸದು. ಮಕ್ಕಳು ತಾವು ಓದುವ ಹಂತದ ಆಧಾರದ ಮೇಲೆ ತಮಗೆ ಬೇಕಾದಂತಹ ಪುಸ್ತಕಗಳನ್ನು ಆರಿಸಿಕೊಂಡು ಓದುತ್ತಾರೆ. ಕತೆಗಳನ್ನು ಮತ್ತು ಭಾಷೆಯನ್ನು ಮಕ್ಕಳು ತುಂಬಾ ಇಷ್ಟಪಟ್ಟರು."

ಗೀತಾ ರಾಣಿ
ಪ್ರಾಥಮಿಕ ಶಾಲಾ ಶಿಕ್ಷಕಿ

ಚಿತ್ರ 1: *ಚಿರಂತನ ರಂಗ ಅಧ್ಯಯನ ಕೇಂದ್ರದ ಸಂಸ್ಥಾಪಕರಾದ ಕಿರಣ್ ಭಟ್ ಓದು, ಮಾತುಕತೆಯೊಂದಿಗೆ ಹಾಡುಗಳನ್ನು ಒಳಗೊಂಡಿದ್ದ ಚರ್ಚೆಯನ್ನು ನಡೆಸಿಕೊಟ್ಟರು.*

ಚಿತ್ರ 2: *ಮಕ್ಕಳು ತಾವು ಆಯ್ಕೆ ಮಾಡಿಕೊಂಡ ಪುಸ್ತಕಗಳನ್ನು ಓದಿದರು, ಚಿತ್ರ ಬಿಡಿಸುವ ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಿದರು. ಖುಷಿಯಿಂದ ಮನೆಗೆ ಪುಸ್ತಕಗಳನ್ನು ಕೊಂಡೊಯ್ದರು.*

ಚಿತ್ರ 3: *ಕರ್ನಾಟಕದ ಕೊಪ್ಪಳ ಜಿಲ್ಲೆಯಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ನಮ್ಮ ಅನುವಾದಕಿ ವಾಣಿ ಪೆರಿಯೊಡಿ ಮುಖವಾಡ ಕತೆಯನ್ನು ಓದಿದರು. ಮಕ್ಕಳು ಕತೆಯನ್ನು ಖುಷಿಯಿಂದ ಕೇಳಿ, ನಂತರ ಮುಖವಾಡಗಳನ್ನು ತಯಾರಿಸಿದರು.*

ಚಿತ್ರ 4: *ದೆಹಲಿಯ ಸರ್ವೋದಯ ಕನ್ಯಾ ವಿದ್ಯಾಲಯದ 3ನೇ ತರಗತಿಯ ಮಕ್ಕಳು, ಹ್ಯಾಂಗಿಂಗ್ ಲೈಬ್ರರಿ ಕಿಟ್‌ನಲ್ಲಿದ್ದ ನಮ್ಮ ಪುಸ್ತಕಗಳನ್ನು ಕುತೂಹಲದಿಂದ ನೋಡಿದರು.*

ಪ್ರತಿ ಮಗುವಿಗೊಂದು ಕತೆ

~20ಮಿಲಿಯನ್
ಆನ್‌ಲೈನ್ ಓದು

361
ಭಾಷೆಗಳು

60.3 ಸಾವಿರ
ಕತೆಗಳು

PRATHAM BOOKS storyweaver

ಡಾ. ರುಡಿನ್ ಸಿಮ್ಸ್ ಬಿಷಪ್ ಅವರ ಪ್ರಸಿದ್ಧವಾದ ಮಾತೊಂದು ಹೀಗಿದೆ, "ಪುಸ್ತಕಗಳು ಕೆಲವೊಮ್ಮೆ ಕಿಟಕಿಗಳಂತೆ. ಅವು ವಾಸ್ತವದ ಅಥವಾ ಕಲ್ಪಿತವಾದ, ಪರಿಚಿತವಾದ ಅಥವಾ ವಿಚಿತ್ರವಾದ ಪ್ರಪಂಚವನ್ನು ತೆರೆದು ತೋರುತ್ತವೆ. ಈ ಕಿಟಕಿಗಳು ಸರಿಸುವ ಗಾಜಿನ ಬಾಗಿಲುಗಳಿದ್ದಂತೆ. ಓದುಗರು, ಲೇಖಕರು ಸೃಷ್ಟಿಸಿದ ಅಥವಾ ಮರುಸೃಜಿಸಿದ ಲೋಕದ ಭಾಗವಾಗಲು ಕಲ್ಪನೆಯಲ್ಲಿ ಈ ಬಾಗಿಲುಗಳನ್ನು ಹಾದು ಹೋಗಬೇಕು." ಇದನ್ನು ಗಮನದಲ್ಲಿಟ್ಟುಕೊಂಡು, ನಾವು ಓದುವ ಖುಷಿಯನ್ನು ಹೊಂದಲು, ಮೂಲಭೂತ ಸಾಕ್ಷರತೆಯನ್ನು ಬೆಳೆಸಲು, ಯುವಕಲಿಕಾರ್ಥಿಗಳಲ್ಲಿ STEM ಮನೋಭಾವವನ್ನು ಬೆಳೆಸಲು, ಹಿಂದಿ, ಮರಾಠಿ, ಒಡಿಯಾ ಮೊದಲಾದ ಭಾರತೀಯ ಭಾಷೆಗಳಲ್ಲಿ ಕತೆ ಆಧಾರಿತ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿದ್ದೇವೆ. ಈ ವರ್ಷ ಸುಮಾರು 15 ಸಾವಿರ ಶಿಕ್ಷಕರಿಗೆ ಕಥಾ ಆಧಾರಿತ ಕಲಿಕಾ ವಿಧಾನದಲ್ಲಿ ತರಬೇತಿ ನೀಡಲಾಯಿತು. ಈ ವಿಧಾನವು ಕಲಿಕೆಯಲ್ಲಿ ಸುಧಾರಣೆ ತರುತ್ತದೆ ಎನ್ನುವುದು ಸಾಬೀತಾಗಿದೆ. ಈ ವರ್ಷ, ರಾಜಸ್ಥಾನದ ಕೋಟಾದ 30 ಶಾಲೆಗಳಲ್ಲಿ ನಮ್ಮ STEM ಸಾಕ್ಷರತಾ ಕಾರ್ಯಕ್ರಮದೊಂದಿಗೆ ನಡೆಸಿದ ಪ್ರಾಯೋಗಿಕ ಅಧ್ಯಯನದಲ್ಲಿ, ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಿದಾಗ ಅವರ ಅಂಕಗಳಲ್ಲಿ 33% ಹೆಚ್ಚಳ ಅಂದರೆ 42%ರಿಂದ 75%ಗೆ ಏರಿಕೆಯಾಗಿರುವುದು ಕಂಡುಬಂದಿದೆ.

ಶಿಕ್ಷಣ ಇಲಾಖೆಗಳ ಸಹಯೋಗದೊಂದಿಗೆ ಜಾರಿಗೆ ತರಲಾದ ಈ ಕಾರ್ಯಕ್ರಮಗಳನ್ನು ಶಿಕ್ಷಕರು ಮತ್ತು ಪೋಷಕರು ಉತ್ಸಾಹದಿಂದ ಸ್ವೀಕರಿಸಿದ್ದಾರೆ. ತುಲ್ಜಾಪುರದ ದಹಿವಾಡಿಯ ಜಿಲ್ಲಾ ಪರಿಷತ್ ಶಾಲೆಯ ಶ್ರೀಮತಿ ಸವಿತಾ ಸಾಠೆ ಅವರು ಫೌಂಡೇಶನಲ್ ಲಿಟ್ರಸಿ ಕಾರ್ಯಕ್ರಮದ ಅನುಷ್ಠಾನದ ನಂತರ, "ನನ್ನ ತರಗತಿಯಲ್ಲಿ, ಓದಿನಲ್ಲಿ ಹಿಂದಿದ್ದ ಮಕ್ಕಳು ಕೂಡ ತರಗತಿಯಲ್ಲಿ ಕತೆಯ ಪುಸ್ತಕಗಳನ್ನು ಆನಂದಿಸುತ್ತಿದ್ದಾರೆ. ತಾವಾಗಿ ಓದಲು ಮುಂದೆ ಬರುತ್ತಿದ್ದಾರೆ," ಎಂದು ಹೇಳಿದರು. ಕಳೆದ ವರ್ಷ, UNICEF ಮತ್ತು MSCERT ಸಹಭಾಗಿತ್ವದಲ್ಲಿ ನಾವು ಉತ್ತರ ಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಗೋವಾದಲ್ಲಿ ಈ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ. 4,50,000 ಮಕ್ಕಳ ಮೇಲೆ ಕಾರ್ಯಕ್ರಮ ಪರಿಣಾಮ ಬೀರಿದೆ. ಇದು ಮಕ್ಕಳಿಗೆ ಓದುವ ಖುಷಿಯ ಜೊತೆಗೆ ಕಲಿಕೆಯನ್ನು ಆನಂದಿಸಲು ಸಹಾಯ ಮಾಡಿದೆ.

ಮಾತೃಭಾಷೆಯಲ್ಲೇ ಓದುವ ಖುಷಿಯನ್ನು ತೆರೆದಿಡಲು ಸಹಯೋಗಗಳು ಅತ್ಯಗತ್ಯ. ಲೇಖಕರು, ಚಿತ್ರಕಾರರು, ಅನುವಾದಕರು, ಶಿಕ್ಷಣ ತಜ್ಞರು ಮತ್ತು ಪೋಷಕರು ಒಟ್ಟಾಗಿ ಈ ಓದಿನ ಖುಷಿಯನ್ನು ಅನುಭವಿಸುವಂತೆ ಮಾಡಲು ಸ್ಟೋರಿವೀವರ್ ದೀರ್ಘಸಮಯದಿಂದ ವೇದಿಕೆಯನ್ನು ಒದಗಿಸಿದೆ. ಹಲವು ರೀತಿಯಲ್ಲಿ ಓದುವುದನ್ನೇ ರಾಷ್ಟ್ರೀಯ ಚಳವಳಿಯಾಗಿಸುವತ್ತ ಗಮನ ಕೇಂದ್ರೀಕರಿಸಿದೆ.

ವಿಶ್ವ ಕತೆ ಹೇಳುವ ದಿನದಂದು (ಮಾರ್ಚ್ 20, 2023), ದೊಡ್ಡವರು ವಾರಕ್ಕೊಮ್ಮೆ ಮಕ್ಕಳಿಗೆ ಜೋರಾಗಿ ಕತೆ ಓದುವುದನ್ನು ಪ್ರೋತ್ಸಾಹಿಸಲು ನಾವು #GetChildrenReading ಅಭಿಯಾನವನ್ನು ಪ್ರಾರಂಭಿಸಿದ್ದೇವೆ. ಈ ಅಭಿಯಾನವು ಸಮುದಾಯಗಳು ಓದುವಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಕತೆ ಪುಸ್ತಕಗಳು ಮತ್ತು ಸಂಪನ್ಮೂಲಗಳನ್ನು ಒದಗಿಸಿತು. ಈ ಉಪಕ್ರಮದ ಭಾಗವಾಗಿ ಸಾವಿರಾರು ಮಂದಿ ಪ್ರತಿವಾರ ರೀಡಿಂಗ್ ಸೆಷನ್ಸ್ ನಡೆಸಿದರು. ಸಮುದಾಯದ ಭಾಗವಹಿಸುವಿಕೆಯ ಪರಿಣಾಮವಾಗಿ ಶ್ರವಣದೋಷವುಳ್ಳ ಮಕ್ಕಳಿಗಾಗಿ AV ಸಂಪನ್ಮೂಲ ಬಳಸಿ ಕತೆ ಹೇಳುವಂತಹ ಅಮೆರಿಕನ್ ಸೈನ್ ಲಾಂಗ್ವೇಜ್‌ನ ಪರಿಹಾರಗಳು ಹುಟ್ಟಿಕೊಂಡವು. ಪುಸ್ತಕ ಕ್ಲಬ್‌ಗಳಲ್ಲಿ ಮಕ್ಕಳ ಕತೆ ಪುಸ್ತಕಗಳನ್ನು ಓದುವ ಮೂಲಕ ಓದುಗರನ್ನು ಬೆಳೆಸಲು ಯತ್ನಿಸುತ್ತಿರುವ AA's Book Nerdsನ ಸಂಸ್ಥಾಪಕಿ ಅರ್ಚನಾ ಅತ್ರಿ ಪ್ರಕಾರ, "ಪ್ರಥಮ್ ಬುಕ್ಸ್‌ನ 'Get Children Reading' ಅಭಿಯಾನವು ಬಹಳ ಮಹತ್ವದ್ದು. ಮಕ್ಕಳಿಗಾಗಿ ಓದುವುದು, ಅವರೊಂದಿಗೆ ಓದುವುದು, ಅವರಿಗೆ ಓದುವ ಖುಷಿಯನ್ನು ಪರಿಚಯಿಸುವುದು, ಪುಸ್ತಕಗಳ ಲೋಕದಲ್ಲಿ ಅವರಿಷ್ಟದಂತೆ ಸ್ವತಂತ್ರವಾಗಿ ವಿಹರಿಸಲು ಬಿಡುವಲ್ಲಿ ಈ ಅಭಿಯಾನವು ಮಹತ್ವದ್ದಾಗಿದೆ."

ಕೊನೆಯದಾಗಿ, ಸ್ಟೋರಿವೀವರ್‌ನಲ್ಲಿ ಎಲ್ಲ ಸಮುದಾಯಗಳಿಗೂ ಸಮಾನವಾಗಿ ಅವರದೇ ಭಾಷೆಗಳಲ್ಲಿ ಕತೆಗಳನ್ನು ಪ್ರಕಟಿಸಬೇಕು ಎನ್ನುವುದರಲ್ಲಿ ನಂಬಿಕೆಯಿಟ್ಟಿದ್ದೇವೆ. ಈ ನಿಟ್ಟಿನಲ್ಲಿ ನಾವು 'ಸೌರಮಂಡಲ'ದವರ The Forgotten Folklore (ಮರೆವಿಗೆ ಸಂದ ಜಾನಪದ) ಯೋಜನೆಯ ಸಹಭಾಗಿಗಳಾದೆವು. ಇದು ಮೇಘಾಲಯದ ಸ್ಥಳೀಯ ಜಾನಪದ ಕತೆಗಳನ್ನು 45 ವರ್ಣಮಯ ಚಿತ್ರಪುಸ್ತಕಗಳಲ್ಲಿ ದಾಖಲಿಸಿತು. ಇದು ಕೇವಲ ಮತ್ತೊಂದು ಪ್ರಕಟಣೆ ಎನ್ನುವಂತಿರದೇ; ಸಾಮುದಾಯಿಕ ಪ್ರಯತ್ನವಾಗಿತ್ತು. ಜನ ಒಟ್ಟಾಗಿ ತಲೆಮಾರುಗಳಿಂದ ಸಾಗಿ ಬಂದಿದ್ದ ಕತೆಗಳನ್ನು ದಾಖಲಿಸಿದರು. ಖಾಸಿ, ಗಾರೋ ಮತ್ತು ಪ್ನಾರ್ ಭಾಷೆಗಳಲ್ಲಿನ ವರ್ಣಮಯ ಜಾನಪದ ಕಥಾಲೋಕ ಅನಾವರಣಗೊಂಡಿದೆ. The Garment Series ಮೇಘಾಲಯದ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನು ಪರಿಚಯಿಸುತ್ತದೆ. ನಿದಾ ಹಿನ್ನಿಯೆವ್ತಾ ಬರೆದ ಮತ್ತು ಅರ್ಬನ್ ಮಾವ್ಲೋಹ್ ಚಿತ್ರಗಳನ್ನು ಬರೆದಿರುವ Ban's Journey in Music ಕತೆಯು ವಾಂಖೇನ್ ಗ್ರಾಮದಲ್ಲಿನ ಹುಡುಗನೊಬ್ಬ ತನ್ನ 'ವಿಶಿಷ್ಟ ರಾಗ'ವನ್ನು ಕಂಡುಕೊಳ್ಳಲು ಹೊರಡುವ ಪಯಣವನ್ನು ಚಿತ್ರಿಸುತ್ತದೆ. ಈ ಕತೆಯು ಏಕಕಾಲಕ್ಕೆ ಮಕ್ಕಳು ಮತ್ತು ದೊಡ್ಡವರನ್ನು ಹಿಡಿದಿಡುತ್ತದೆ. ದ್ವಿಭಾಷಾ ಪುಸ್ತಕಗಳು ಮೋಡಗಳ ನಾಡಿನ ಪ್ರಕೃತಿ ಸೌಂದರ್ಯ, ವೈವಿಧ್ಯಮಯ ಹಕ್ಕಿಗಳ ಬದುಕನ್ನು ಪದಗಳಲ್ಲಿ ಹಿಡಿದಿಟ್ಟಿವೆ. ಸೌರಮಂಡಲದ The Forgotten Folklore ಯೋಜನೆಗಾಗಿ ಸಮುದಾಯದವರೇ ಮೊದಲ ಬಾರಿಗೆ ಕತೆಗಳನ್ನು ಬರೆದು, ಚಿತ್ರ ರಚನೆಕಾರರಾದರು. ಹಲವು ಬಾರಿ ಪರಿಣಾಮಕಾರಿ ಸಾಮಾಜಿಕ ಬದಲಾವಣೆಗಳು ದೊಡ್ಡ ನಡೆಗಳಿಂದಲ್ಲ ಬದಲಿಗೆ ಸರಳವಾಗಿ ನಿಮ್ಮದೇ ಕತೆಯನ್ನು ಹೇಳುವುದರೊಂದಿಗೆ ಉಂಟಾಗುತ್ತವೆ ಎನ್ನುವುದನ್ನು ಈ ಯೋಜನೆಯು ಸಾಬೀತುಪಡಿಸಿತು.

ಇದು ಈ ವರ್ಷದ ನಮ್ಮ ಡಿಜಿಟಲ್ ವೇದಿಕೆಯ ಕತೆ. ಇಲ್ಲಿ ಸೃಷ್ಟಿಯಿಂದ ಹಿಡಿದು ಅನುವಾದದವರೆಗೆ, ಜನರೊಂದಿಗೆ ಸಂಪರ್ಕ ಸಾಧಿಸಿ, ಓದುವ ಪ್ರೀತಿಯನ್ನು ಬೆಳೆಸಲು ನಮ್ಮ ಪಾಲುದಾರರಿಗೆ ಸಹಕಾರ ನೀಡಿ ಬೆಂಬಲಿಸಿದ್ದೇವೆ. ಇದರಿಂದ ಪ್ರತಿ ಮಗುವೂ ತನ್ನ ಮಾತೃಭಾಷೆಯಲ್ಲಿಯೇ ಪುಸ್ತಕ ಓದುವ ಖುಷಿಯನ್ನು ಪಡೆಯಬಹುದಾಗಿದೆ.

ಚಿತ್ರ 1: *ಉರ್ದು ಭಾಷೆಯಲ್ಲಿ #Get Children Reading ಅಭಿಯಾನದಲ್ಲಿ ಭಾಗವಹಿಸಿರುವ ಮಕ್ಕಳು.*

ಚಿತ್ರ 2: *ಸೌರಮಂಡಲದ ಮರೆವಿಗೆ ಸಂದ ಜಾನಪದ ಯೋಜನೆಯ ಕತೆಗಳು ಸ್ಟೋರಿವೀವರ್‌ನಲ್ಲಿ ಪ್ರಕಟವಾಗಿರುವುದು.*

ಚಿತ್ರ 3: *ಕೋಟಾದಲ್ಲಿ STEM ಸಾಕ್ಷರತಾ ಕಾರ್ಯಕ್ರಮವನ್ನು ಜಾರಿಗೊಳಿಸಲಾಯಿತು.*

ಚಿತ್ರ 4: *ಕೋಟಾದಲ್ಲಿ STEM ಸಾಕ್ಷರತಾ ಕಾರ್ಯಕ್ರಮ ತರಬೇತಿಯಲ್ಲಿ ಭಾಗವಹಿಸಿರುವ ಶಿಕ್ಷಕರು.*

ಶಬ್ದಗಾರುಡಿ



PRATHAM BOOKS
donate-a-book

ಈ ವರ್ಷ ಹೆಚ್ಚು ಮಕ್ಕಳಿಗೆ ಕತೆ ಪುಸ್ತಕಗಳನ್ನು ಒದಗಿಸುವ ಸಲುವಾಗಿ ನಮ್ಮ ಕ್ರೌಡ್ ಫಂಡಿಂಗ್ ವೇದಿಕೆಯ ಮೂಲಕ ಜನರನ್ನು, ಎನ್‌ಜಿಒಗಳನ್ನು, ಗ್ರಂಥಾಲಯಗಳನ್ನು ಸಂಪರ್ಕಿಸಿದ ನಮ್ಮ ತಂಡದ ಪ್ರಯತ್ನಗಳು ಯಶಸ್ವಿಯಾದವು. ಹಲವು ಭಾಷೆಗಳಲ್ಲಿನ ನಮ್ಮ ಪುಸ್ತಕಗಳು, ಭಾರತದಾದ್ಯಂತ ದೂರದ ಊರುಗಳ ಮತ್ತು ಸೌಲಭ್ಯ ವಂಚಿತ ಪ್ರದೇಶಗಳ ಮಕ್ಕಳನ್ನು ತಲುಪಿದವು. ಓದುಗರನ್ನು ತಲುಪಿದ ಪ್ರತಿಯೊಂದು ಪುಸ್ತಕದೊಂದಿಗೆ, ಸಂತೋಷದ ಹೊಸ ಮಾಯಾಲೋಕವೊಂದನ್ನು ತೆರೆಯಲು ನಮಗೆ ಸಾಧ್ಯವಾಗಿದೆ!

ಹಿಮ ಪರ್ವತಗಳು, ನದಿಗಳಿಂದ ಆವೃತವಾದ ಜಮ್ಮು ಮತ್ತು ಕಾಶ್ಮೀರದ ಗಡಿ ಪಟ್ಟಣವಾದ ಉರಿಯ ಜಾಂಬೂರ್ ಪಟ್ಟನ್‌ನಲ್ಲಿ ಪ್ರಾಥಮಿಕ ಶಾಲೆ ಮತ್ತು ಅದರ ಅಕ್ಕಪಕ್ಕ ಶಾಲೆಗಳು ಕತೆ ಪುಸ್ತಕಗಳ ತಮ್ಮದೇ ಆದ ಮೊದಲ ಗ್ರಂಥಾಲಯವನ್ನು ಪಡೆದುಕೊಂಡವು. ಮಕ್ಕಳು ಮೊದಲ ಬಾರಿಗೆ ತಮ್ಮ ಮಾತೃಭಾಷೆಯಾದ ಉರ್ದುವಿನಲ್ಲಿದ್ದ ಕತೆ ಪುಸ್ತಕಗಳನ್ನು ಓದಿ ಖುಷಿಪಟ್ಟರು.

“ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸುವಲ್ಲಿ ಪ್ರತಿಯೊಬ್ಬರ ಪಾತ್ರವೂ ಇದೆ. ಪ್ರಥಮ್ ಬುಕ್ಸ್ ಈ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಹಲವು ಭಾಷೆಗಳಲ್ಲಿ ಹಲವು ವಿಷಯಗಳ ಬಗ್ಗೆ ಮಕ್ಕಳ ಪುಸ್ತಕಗಳನ್ನು ರೂಪಿಸಿದ್ದಾರೆ. ‘Ibtida ಅಂದರೆ ಶುರುವಾತು’ ನಡೆಗಳು ದೇಶವನ್ನು ಒಗ್ಗೂಡಿಸಿ, ಮಕ್ಕಳಿಗಾಗಿ ಉತ್ತಮ ಸಮಾಜವನ್ನು ನಿರ್ಮಿಸುತ್ತವೆ.”

ಮೇಜರ್ ಅಭಿಲಾಷ್ ಶರ್ಮ, 16ನೇ ಬೆಟಾಲಿಯನ್, ರಜಪೂತಾನ ರೈಫಲ್ಸ್.

ಯುಕ್ಯಾಟಪಲ್ಟ್ ಫೌಂಡೇಶನ್‌ನ ಸ್ಥಾಪಕಿ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಪ್ರೇಮಾ ಮಿಶ್ರಾ, ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಧರಂಗಾಂವ್‌ನ ಗ್ರಾಮೀಣ ಪ್ರದೇಶದಲ್ಲಿ STEM ಸಾಕ್ಷರತಾ ಪುಸ್ತಕಗಳನ್ನು ಒದಗಿಸಲು ಹಣವನ್ನು ಸಂಗ್ರಹಿಸಿದರು. ಈ ಪುಸ್ತಕಗಳನ್ನು ಈಗಿರುವ ಪಠ್ಯಕ್ರಮದೊಂದಿಗೆ ಸಂಯೋಜಿಸಲಾಗಿದೆ. ಇದು STEM ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಿದೆ. STEM ಕಲಿಕೆಯ ಮಹತ್ವವನ್ನು ವಿವರಿಸಲು ಮುಖ್ಯೋಪಾಧ್ಯಾಯರಿಗೆ ತರಬೇತಿ ಅವಧಿಗಳಲ್ಲಿಯೂ ಅವುಗಳನ್ನು ಬಳಸಿಕೊಳ್ಳಲಾಯಿತು.

2.1 ಲಕ್ಷ
ಮಕ್ಕಳನ್ನು ತಲುಪಲಾಗಿದೆ

41,000
ಪುಸ್ತಕಗಳ ವಿತರಣೆ

800+
ದಾನಿಗಳು



ಅರುಣಾಚಲ ಪ್ರದೇಶದ ಪುಲಿ (Pulyi) ಗ್ರಾಮದ ಮ್ವ್ಯಾ(Mwya)ದಲ್ಲಿರುವ ನ್ಯುಬು ನೈವ್ಗಮ್ ಯೆರ್ಕೊ (Nyubu Nyvgam Yerko) ಶಾಲೆಯ ಮಕ್ಕಳು ಡೊನ್ಯಿ ಪೊಲೊ (Donyi Polo) ಸಾಂಸ್ಕೃತಿಕ ಮತ್ತು ದತ್ತಿ ಟ್ರಸ್ಟ್‌ನ ಕಾರಣದಿಂದಾಗಿ, ಕತೆ ಪುಸ್ತಕಗಳನ್ನು ಪಡೆದರು. ಪ್ರದೇಶದ ಸ್ಥಳೀಯ ಸಮುದಾಯಗಳ ಸಂಪ್ರದಾಯಗಳನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು ಬದ್ಧವಾಗಿರುವ ಟ್ರಸ್ಟ್, 2022ರಲ್ಲಿ ನೈಶಿ (Nyishi) ಬುಡಕಟ್ಟಿನ ಮಕ್ಕಳಿಗಾಗಿ ಶಾಲೆಯನ್ನು ಸ್ಥಾಪಿಸಿತು.

ಮಣಿಪುರದಲ್ಲಿ ನಡೆದ ಗಲಭೆಗಳಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಮಕ್ಕಳನ್ನು ಪರಿಹಾರ ಶಿಬಿರಗಳಿಗೆ ಸ್ಥಳಾಂತರಗೊಳಿಸಲಾಯಿತು. ಅಲ್ಲಿ ಅವರಿಗೆ ಪುಸ್ತಕಗಳು ಲಭ್ಯವಿರಲಿಲ್ಲ. ಸೆಂಟರ್ ಫಾರ್ ಕಮ್ಯುನಿಟಿ ಇನಿಶಿಯೇಟಿವ್ (CCI) ಮಣಿಪುರದ ಲಮ್ಕಾದಲ್ಲಿ ಈ ಮಕ್ಕಳಿಗಾಗಿ ಇನ್‌ಕ್ಲೂಸಿವ್ ಕಮ್ಯುನಿಟಿ ಲರ್ನಿಂಗ್ ಸೆಂಟರ್ (iCLC) ಸ್ಥಾಪಿಸಿತು. ಅನೇಕ ಶಿಬಿರಗಳನ್ನು ಆಯೋಜಿಸಿತು. ಇಂತಹ ಸಮಯದಲ್ಲಿ ಮಕ್ಕಳನ್ನು ಸಾಹಿತ್ಯ ಮತ್ತು ಪುಸ್ತಕ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಲು ಪ್ರಥಮ್ ಬುಕ್ಸ್‌ನ ಕಥಾ ಪುಸ್ತಕಗಳನ್ನು ಬಳಸಲಾಗುತ್ತಿದೆ.

ಚಿತ್ರ 1: *ಅರುಣಾಚಲ ಪ್ರದೇಶದ ಮ್ವ್ಯಾದಲ್ಲಿರುವ ನ್ಯುಬು ನೈವ್ಗಮ್ ಯೆರ್ಕೊದ ಮಕ್ಕಳಿಗಾಗಿ ಪುಸ್ತಕಗಳು.*
ಚಿತ್ರ 2: *ಪುಸ್ತಕಗಳ ಮೂಲಕ ಮಣಿಪುರದ ಲಮ್ಕಾದಲ್ಲಿ ಸ್ಥಳಾಂತರಗೊಂಡ ಮಕ್ಕಳ ಸಬಲೀಕರಣ.*

ಚಿತ್ರ 3 ಮತ್ತು 4: *ಕಾಶ್ಮೀರ ಕಣಿವೆಯ ಮೊದಲ ಗ್ರಂಥಾಲಯವನ್ನು ಜಮ್ಮು ಮತ್ತು ಕಾಶ್ಮೀರದ ಜಾಂಬೂರ್ ಪಟ್ಟನ್‌ನಲ್ಲಿರುವ ಉರಿಯಲ್ಲಿ ಸ್ಥಾಪಿಸಲಾಯಿತು.*

ಚಿತ್ರ 5: *ಜಲಗಾಂವ್ ಜಿಲ್ಲೆಯ ಧರಂಗಾವ್ ಹಳ್ಳಿಯ ಮಕ್ಕಳಿಗಾಗಿ STEM ಪುಸ್ತಕಗಳು.*

ಕತೆಗಳಿಗೆ ರೆಕ್ಕೆ ಕಟ್ಟಿ

~1.5 ಮಿಲಿಯನ್

ಪುಸ್ತಕಗಳ ಪ್ರಸರಣ

5+ ಮಿಲಿಯನ್

ಮಕ್ಕಳನ್ನು ತಲುಪಿದ್ದೇವೆ

6,400

'ತರಗತಿಯಲ್ಲಿ ಗ್ರಂಥಾಲಯ' ವಿತರಣೆ

27 ರಾಜ್ಯಗಳು ಮತ್ತು

6 ಕೇಂದ್ರಾಡಳಿತ ಪ್ರದೇಶಗಳು

245+

ಸಂಸ್ಥೆಗಳು

ಪುಸ್ತಕಗಳು ಎಲ್ಲರಿಗೂ ಸಿಗುವಂತಾಗಬೇಕು ಎನ್ನುವುದು ಪ್ರಥಮ್ ಬುಕ್ಸ್‌ನ ಮುಖ್ಯ ಗುರಿ. ಪ್ರತಿಯೊಂದು ಮಗುವಿನ ಕೈಯಲ್ಲಿ ಪುಸ್ತಕ ನೀಡಬೇಕೆಂದೇ ನಮ್ಮ ತಂಡವು ಎಲ್ಲ ಪ್ರದೇಶಗಳಲ್ಲಿ, ಭಾಷೆಗಳಲ್ಲಿ ಕೆಲಸ ಮಾಡುತ್ತಿದೆ. ನಾವು ಹೊಸ ಸ್ಥಳ-ಮಕ್ಕಳು-ಶಿಕ್ಷಕರನ್ನು ತಲುಪುವಲ್ಲಿ ಮಹತ್ವದ ಪ್ರಗತಿ ಸಾಧಿಸಿದ್ದೇವೆ. ಗಮನಾರ್ಹ ಸಾಧನೆಯೆಂದರೆ ನಾವು ಈ ಮೊದಲು ಕೆಲಸ ಮಾಡಿರದ ಭಾಷೆಗಳಲ್ಲೂ ಪುಸ್ತಕಗಳು ಮತ್ತು ಸ್ಟೋರಿ ಕಾರ್ಡುಗಳು ಸಿಗುವಂತೆ ಮಾಡಿದ್ದೇವೆ. ಇವುಗಳಲ್ಲಿ ಕೆಲವು; ಅಳಿವಿನಂಚಿನಲ್ಲಿರುವ, ಕಡಿಮೆ ಜನ ಮಾತನಾಡುವ ಭಾಷೆಗಳು.

ಅಳಿವಿನಂಚಿನಲ್ಲಿರುವ ಅಕಾ ಹ್ರುಸ್ಸೋ ಮತ್ತು ಸಿಂಗ್ಫೋ -ಈ ಎರಡೂ ಭಾಷೆಗಳಲ್ಲಿ ಒಟ್ಟು 3,500 ಸ್ಟೋರಿ ಕಾರ್ಡ್‌ಗಳನ್ನು ಮುದ್ರಿಸಿ ಪ್ರಸರಣ ಮಾಡಲಾಯಿತು. ಅಕಾ ಹ್ರುಸ್ಸೋ ಭಾಷೆಯನ್ನು ಅರುಣಾಚಲ ಪ್ರದೇಶದಲ್ಲಿ ಕೇವಲ 4,000 ಜನರು ಮಾತನಾಡುತ್ತಾರೆ, ಸಿಂಗ್ಫೋ ಭಾಷೆಯನ್ನು ಅಸ್ಸಾಂನಲ್ಲಿ ಕೇವಲ 3,000 ಜನರು ಮಾತನಾಡುತ್ತಾರೆ.

ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳೊಂದಿಗೆ ಕೆಲಸ ಮಾಡುವ ಶಿಕ್ಷಾರ್ಥ್ ಟ್ರಸ್ಟ್‌ಗಾಗಿ ಮೊದಲ ಬಾರಿಗೆ ಗೊಂಡಿ ಭಾಷೆಯಲ್ಲಿ ತೊಂಬತ್ತೆರಡು ಕತೆ ಪುಸ್ತಕಗಳನ್ನು ಮುದ್ರಿಸಲಾಯಿತು. ಇದರೊಂದಿಗೆ, ಗೊಂಡಿ ಭಾಷೆಯ ಮಕ್ಕಳಿಗಾಗಿ 'ತರಗತಿಯಲ್ಲಿ ಗ್ರಂಥಾಲಯ'ದ ಭಾಗವಾಗಿ 266 ಕಿಟ್‌ಗಳ ಪ್ರಸರಣ ಮಾಡಲಾಯಿತು.

ನಮ್ಮ 20ನೇ ವಾರ್ಷಿಕೋತ್ಸವದ ಭಾಗವಾಗಿ, 20 ಪುಸ್ತಕಗಳನ್ನು ಒಳಗೊಂಡ "ಸಂತಸದ ಸಂಚಿ"ಯನ್ನು ಬಿಡುಗಡೆ ಮಾಡಲಾಯಿತು. ಕನ್ನಡ, ಮರಾಠಿ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 1,600 ಸಂಚಿಗಳನ್ನು ಮುದ್ರಿಸಿದ್ದೇವೆ.

60 ಓದುವ ಸಂಪನ್ಮೂಲಗಳನ್ನು ಹೊಂದಿರುವ, ಆರು ಭಾಷೆಗಳಲ್ಲಿರುವ (ಕನ್ನಡ, ತೆಲುಗು, ಮರಾಠಿ, ಗುಜರಾತಿ, ಹಿಂದಿ ಮತ್ತು ಇಂಗ್ಲಿಷ್) "Early Learner's Library"ಯನ್ನು ಪ್ರಸರಣ ಮಾಡಲಾಯಿತು.

ದೇಶಾದ್ಯಂತದ ಮಕ್ಕಳಿಗೆ ನಮ್ಮ ಪುಸ್ತಕಗಳು ಮತ್ತು ಕಲಿಕಾ ಉತ್ಪನ್ನಗಳನ್ನು ತಲುಪಿಸುವ ಹಲವಾರು ಸಹಭಾಗಿತ್ವಗಳು ಇದ್ದವು.

ಮಧ್ಯಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಢದ ದೂರದ ಭೌಗೋಳಿಕ ಪ್ರದೇಶಗಳಲ್ಲಿ ಹರಡಿರುವ

CARITAS ಇಂಡಿಯಾದ ಖುಷಾಲ್ ಬಚ್ಪನ್ ಕಾರ್ಯಕ್ರಮದ ಮೂಲಕ, 4,173ಕ್ಕೂ ಹೆಚ್ಚು ಮಕ್ಕಳನ್ನು ತಲುಪಲಾಯಿತು. 85ಕ್ಕೂ ಹೆಚ್ಚು ಶೈಕ್ಷಣಿಕ ಮಾರ್ಗದರ್ಶಕರಿಗೆ ಮಕ್ಕಳ ನಮ್ಮ ಪುಸ್ತಕಗಳನ್ನು ಕಲಿಸಲು ಸಾಧ್ಯವಾಗುವಂತೆ ಅವರ ಸಾಮರ್ಥ್ಯವನ್ನು ಹೆಚ್ಚಿಸಲಾಯಿತು.

ಪ್ರಥಮ್ ಬುಕ್ಸ್, ಹ್ಯಾಂಗಿಂಗ್ ಲೈಬ್ರರಿಗಳು ಮಕ್ಕಳ ಚಟುವಟಿಕೆ ಕೇಂದ್ರಗಳಾದ ಬಾಲ್ ಚೌಪಲ್‌ಗಳಿಗೆ ಅಮೂಲ್ಯವಾದ ಸಂಪನ್ಮೂಲಗಳಾಗಿ ಸೇರ್ಪಡೆಯಾದವು. ಐವತ್ತೆರಡು 'ತರಗತಿಯಲ್ಲಿ ಗ್ರಂಥಾಲಯ' ಕಿಟ್‌ಗಳನ್ನು ಪ್ರಸರಣ ಮಾಡಲಾಯಿತು.

ಸಮುದಾಯ ಶಿಕ್ಷಣತಜ್ಞರ ಅನಿಸಿಕೆ:

"ಗ್ರಂಥಾಲಯವನ್ನು ಪರಿಚಯಿಸಿದಾಗ, ಕತೆ ಪುಸ್ತಕಗಳನ್ನು ಓದುವ ಮೇರು ಉತ್ಸಾಹಕ್ಕೆ ಸಾಕ್ಷಿಯಾದೆ. ಇದು ಪ್ರತಿಯೊಬ್ಬರಿಗೂ ಜೋರಾಗಿ ಓದುವ ಅವಕಾಶವನ್ನು ಒದಗಿಸಿತು. ಬಹುತೇಕ ಎಲ್ಲರೂ ಓದುವ, ಕೇಳುವ ತಮ್ಮ ಸರದಿಗಾಗಿ ಕಾದು, ಇದರಲ್ಲಿ ಉತ್ಸಾಹದಿಂದ ಪಾಲ್ಗೊಂಡರು. ಇದು ಅವರಿಗೊಂದು ಹೊಸ ಅನುಭವವಾಗಿತ್ತು."

ಕತೆ ಹೇಳುವುದು ನವ ಸಹಯೋಗ್ ಫೌಂಡೇಶನ್‌ನ ಕಾರ್ಯಕ್ರಮದ ಬಹುಮುಖ್ಯ ಭಾಗ. ಪ್ರತಿ ಶನಿವಾರ ಒಂದು ಗಂಟೆ ಈ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಪ್ರಥಮ್ ಬುಕ್ಸ್‌ನ ಬೇರೆ ಬೇರೆ ಹಂತಗಳ ಪುಸ್ತಕಗಳನ್ನು ಮಕ್ಕಳಿಗೆ ಕತೆ ಹೇಳಲು ಬಳಸಲಾಗುತ್ತದೆ. ಇದಕ್ಕೆಂದೇ ಪ್ರತಿ ಹಳ್ಳಿಗೂ ಒಬ್ಬ ಸಂಯೋಜಕರನ್ನು ನೇಮಿಸಲಾಗಿದೆ. ಈ ಫೌಂಡೇಶನ್ ಪ್ರಸ್ತುತ ಕರ್ನಾಟಕ, ತಮಿಳುನಾಡು ಮತ್ತು ನಾಗಾಲ್ಯಾಂಡ್‌ಗಳ 300 ಹಳ್ಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನವೊಂದಕ್ಕೆ 9,000+ ಮಕ್ಕಳನ್ನು ಓದುವುದರಲ್ಲಿ ತೊಡಗಿಸುತ್ತದೆ.

ಥಿಂಕ್‌ಶಾರ್ಪ್ ಫೌಂಡೇಶನ್‌ನ ಬುಕ್ ಮಿತ್ರ ಕಾರ್ಯಕ್ರಮದಡಿಯಲ್ಲಿ, ಶಾಲೆಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದೆ. ಪ್ರತಿಯೊಂದು ಗ್ರಂಥಾಲಯದಲ್ಲಿ ಪ್ರಥಮ್ ಬುಕ್ಸ್‌ನ ಬೇರೆ ಬೇರೆ ವಿಷಯಗಳ ಮತ್ತು ಪ್ರಕಾರಗಳ ಮರಾಠಿ ಮತ್ತು ಇಂಗ್ಲಿಷ್ ಪುಸ್ತಕಗಳಿವೆ. 36,000 ಪುಸ್ತಕಗಳನ್ನು ಬುಕ್ ಮಿತ್ರ ಕಾರ್ಯಕ್ರಮದಲ್ಲಿ ಬಳಸಲಾಗಿದೆ.

ಕತೆ ಹೇಳುವ ಮೂಲಕ ಆರಂಭಿಕ ವರ್ಷಗಳಲ್ಲಿ ಕಂಡುಬರುವ ಕಲಿಕೆಯ ಅಂತರವನ್ನು ಕಡಿಮೆ ಮಾಡಲೆಂದೇ ಇಂಡಿ ವಿಲೇಜ್ ಫೌಂಡೇಶನ್ ಪ್ರತಿ ಶನಿವಾರ ಕತೆ ಹೇಳುವ ಕಾರ್ಯಕ್ರಮವನ್ನು ನಡೆಸುತ್ತದೆ.

ಅವರು 35 ಮಿನಿ- ಗ್ರಂಥಾಲಯಗಳನ್ನು ಸ್ಥಾಪಿಸಿದ್ದಾರೆ. 'ತರಗತಿಯಲ್ಲಿ ಗ್ರಂಥಾಲಯ' ಕಿಟ್ ಮೂಲಕ 6,218 ಮಕ್ಕಳನ್ನು ತಲುಪಿದ್ದಾರೆ.

ಇಂಡಿ ವಿಲೇಜ್ ಫೌಂಡೇಶನ್ ತಂಡ ಹೀಗೆ ಹೇಳುತ್ತದೆ,

"ನಮ್ಮ ಪಾಲುದಾರ ಶಾಲೆಗಳಲ್ಲಿ ನಾವು ಗ್ರಂಥಾಲಯ ದಿನವನ್ನು ಆಚರಿಸಿದಾಗ, ಕತೆ ಪುಸ್ತಕವನ್ನು ಕೈಯಲ್ಲಿ ಹಿಡಿದ ಮಕ್ಕಳ ಕಣ್ಣಲ್ಲಿ ಕಂಡ ಮಿಂಚು ಅದ್ಭುತವಾಗಿತ್ತು. ಇಂತಹ ಕ್ಷಣಗಳು ಸಮಾಜದ ಮೇಲೆ ಅರ್ಥಪೂರ್ಣ ಪರಿಣಾಮ ಬೀರುವಲ್ಲಿ ನಮ್ಮ ಪ್ರಯತ್ನಗಳು ಫಲಕಾರಿಯಾಗಿವೆ ಎನ್ನುವ ಭರವಸೆಯನ್ನು ಮೂಡಿಸುತ್ತವೆ. ಪ್ರಥಮ್ ಬುಕ್ಸ್ ಜೊತೆಗಿನ ಸಂಬಂಧ ನಮಗೆ ಅತ್ಯಮೂಲ್ಯವಾದದ್ದು. ಗ್ರಾಮೀಣ ಭಾರತದ ಯುವಕಲಿಕಾರ್ಥಿಗಳನ್ನು ಸಬಲರಾಗಿಸುವಲ್ಲಿನ ಧ್ಯೇಯಕ್ಕೆ ಅವರು ನಮ್ಮೊಂದಿಗಿರುತ್ತಾರೆ ಎಂದು ಆಶಿಸುತ್ತೇವೆ."

CINI ಒರಿಸ್ಸಾ, ಒರಿಸ್ಸಾದ ರಾಯಗಡ ಜಿಲ್ಲೆಯ ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಿದೆ. CINI ಸಹಯೋಗದೊಂದಿಗೆ, ನಾವು ಒರಿಯಾ ಮತ್ತು ಕುಯಿ ಭಾಷೆಗಳಲ್ಲಿ 34,000+ ಪುಸ್ತಕಗಳನ್ನು ಪ್ರಸರಣ ಮಾಡಿದ್ದೇವೆ. ಇವು 57,000 ಮಕ್ಕಳನ್ನು ತಲುಪಿವೆ. ಕುಯಿ ಎಂಬುದು ಮಕ್ಕಳಿಗಾಗಿ ಬಹು ಕಡಿಮೆ ಸಾಹಿತ್ಯವನ್ನು ಹೊಂದಿರುವ ಬುಡಕಟ್ಟು ಭಾಷೆ. ಈ ಮಕ್ಕಳ ಓದುವ ಪ್ರಯಾಣದಲ್ಲಿ ಈ ಪುಸ್ತಕಗಳು ಒದಗಿದ್ದು ಮಹತ್ವದ್ದಾಗಿದೆ.

ಪ್ರಥಮ್ ಎಜುಕೇಷನ್ ಫೌಂಡೇಶನ್ ಛತ್ತೀಸ್‌ಗಢ ಜಿಲ್ಲೆಯ ನಾಲ್ಕು ಬ್ಲಾಕ್‌ಗಳಲ್ಲಿರುವ 430 ಹಳ್ಳಿಗಳಲ್ಲಿ ಹ್ಯಾಂಗಿಂಗ್ ಲೈಬ್ರರಿಗಳನ್ನು ಸ್ಥಾಪಿಸಿದೆ. 10,000 ಮಕ್ಕಳು ಇದರ ಪ್ರಯೋಜನವನ್ನು ಪಡೆದಿದ್ದಾರೆ.

ಟಾಟಾ ಟ್ರಸ್ಟ್‌ಗಳ ಸಹವರ್ತಿ ಸಂಸ್ಥೆಯಾದ ಸೆಂಟರ್ ಫಾರ್ ಮೈಕ್ರೋಫೈನಾನ್ಸ್ (CmF) ರಾಜಸ್ಥಾನದಲ್ಲಿರುವ ಲಾಭರಹಿತ ಸಂಸ್ಥೆಯಾಗಿದೆ. ಅದರ 'Access to Library Resources' ಕಾರ್ಯಕ್ರಮದ ಮೂಲಕ ಮಕ್ಕಳಿಗೆ ಕತೆಯ ಪುಸ್ತಕಗಳು ಓದಲು ಸಿಕ್ಕಿವೆ.



ಈ ಯೋಜನೆಯ ಅಡಿಯಲ್ಲಿ ಸಿಕ್ಕ ಕತೆಗಳು, ಓದುವ ಸಾಮಗ್ರಿಗಳು, ಲೈಬ್ರರಿ ಚಟುವಟಿಕೆಗಳಿಂದ ಮಕ್ಕಳು ಸಂತಸಗೊಂಡಿದ್ದಾರೆ. 23,000 ಪುಸ್ತಕಗಳೊಂದಿಗೆ ಪ್ರಥಮ್ ಬುಕ್ಸ್ ಈ ಉಪಕ್ರಮವನ್ನು ಬೆಂಬಲಿಸಿತು.

ನಾವು ನಮ್ಮ ತರಗತಿಯ ಕೊಠಡಿಗಳಲ್ಲಿ ಒಂದನ್ನು ಗ್ರಂಥಾಲಯವಾಗಿ ಪರಿವರ್ತಿಸಿದ್ದೇವೆ. ಪ್ರತಿಯೊಂದು ತರಗತಿಗೂ ಸರದಿಯಂತೆ ಒಂದು ದಿನ ಗ್ರಂಥಾಲಯದಲ್ಲಿ ಕಳೆಯುವ ಅವಕಾಶ ನೀಡಲಾಗುತ್ತದೆ. ಇದರೊಂದಿಗೆ, ನಾನು ಪ್ರತಿದಿನ ಬೆಳಗ್ಗೆ ಪ್ರಾರ್ಥನೆಯ ಸಮಯದಲ್ಲಿ ಎರಡು ಕತೆಗಳನ್ನು ಹೇಳುತ್ತೇನೆ. ಬೆಳಗ್ಗೆ ಕತೆ ಕೇಳುವುದನ್ನು ಮಕ್ಕಳು ಬಹಳ ಆನಂದಿಸುತ್ತಾರೆ. ನಮ್ಮ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಅರ್ಚನಾ ಸಿಂಗ್ ಅವರ ಬೆಂಬಲದಿಂದ ಇದು ಸಾಧ್ಯವಾಯಿತು.

ನಿಗರ್ ಖಾನಮ್, ಗ್ರಂಥಾಲಯ ಶಿಕ್ಷಕರು, ಸರ್ಕಾರಿ ಹಿರಿಯ ಮಾಧ್ಯಮಿಕ ಶಾಲೆ ಕರ್ಮೋಡಾ, ಸವಾಯಿ ಮಾಧೋಪುರ್

ಇಲ್ಲಿ ಹೆಸರಿಸಬಹುದಾದ ಕೆಲವು ಪ್ರಮುಖ ಸಾಂಸ್ಥಿಕ ಪೋಷಕರು - ರೂಮ್ ಟು ರೀಡ್ ಇಂಡಿಯಾ ಟ್ರಸ್ಟ್, ಪ್ರಥಮ್ ಎಜುಕೇಶನ್ ಫೌಂಡೇಶನ್, ಅಜೀಂ ಪ್ರೇಮ್‌ಜಿ ಫೌಂಡೇಶನ್ ಫಾರ್ ಡೆವಲಪ್‌ಮೆಂಟ್, ಡಿಎಂಎಆರ್‌ಟಿ ಫೌಂಡೇಶನ್, ಇಂಡಿಯಾ ಲಿಟರಸಿ ಪ್ರಾಜೆಕ್ಟ್, ಎಚ್‌ಸಿಎಲ್ ಫೌಂಡೇಶನ್, ಯುನೈಟೆಡ್ ವೇ, ನವ ಸಹಯೋಗ್ ಫೌಂಡೇಶನ್, ಥಿಂಕ್‌ಶಾರ್ಪ್ ಫೌಂಡೇಶನ್, ಸಿಐಎನ್‌ಐ, ಭಾರ್ತಿ ಫೌಂಡೇಶನ್, ಬುಕ್ಸ್ ಫಾರ್ ಆಲ್ ಟ್ರಸ್ಟ್, ಸೆಂಟರ್ ಫಾರ್ ಮೈಕ್ರೋಫೈನಾನ್ಸ್, ಲರ್ನಿಂಗ್ ಲಿಂಕ್ಸ್ ಫೌಂಡೇಶನ್, ಆಸ್ಪೈರ್, ಕೋಟಕ್ ಎಜುಕೇಶನ್ ಫೌಂಡೇಶನ್, ರಾಮನ್ ಕಾಂತ್ ಮುಂಜಾಲ್ ಫೌಂಡೇಶನ್, ಅಧ್ಯಯನ್ ಕ್ವಾಲಿಟಿ ಎಜುಕೇಶನ್ ಫೌಂಡೇಶನ್, ದಿ ಜೆಸಿಬಿ ಲಿಟರೇಚರ್ ಫೌಂಡೇಶನ್ ಮತ್ತು ಲೀಡರ್‌ಶಿಪ್ ಫಾರ್ ಸ್ಕಿಲ್ ಎಜುಕೇಶನ್ ಫೌಂಡೇಶನ್.

ನಮ್ಮ ಪ್ರಮುಖ ಸರ್ಕಾರಿ ಪೋಷಕರು ಜಾರ್ಖಂಡ್ ಶಿಕ್ಷಾ ಪರಿಯೋಜನೆ, ಗುಮ್ಲಾ (ಜಾರ್ಖಂಡ್); ಸಮಗ್ರ ಬುಡಕಟ್ಟು ಅಭಿವೃದ್ಧಿ ಸಂಸ್ಥೆ, ಬುಡಕಟ್ಟು ಕಲ್ಯಾಣ ಇಲಾಖೆ, ಉಟ್ನೂರ್ ಜಿಲ್ಲೆ, ತೆಲಂಗಾಣ; ಸಮಗ್ರ ಶಿಕ್ಷಾ, ದಾದ್ರಾ-ನಗರ್ ಹವೇಲಿ, ದಮನ್-ದಿಯು.

ಹೆಸರಿಸಬಹುದಾದ ಕೆಲವು ಪ್ರಮುಖ ರಿಟೈಲ್ ವ್ಯಾಪಾರಿಗಳಲ್ಲಿ ಕಿಂಗ್‌ಮೋರ್, ಮೈಂಡ್‌ವರ್ತ್, ಸಮೃದ್ಧಿ ಎಂಟರ್‌ಪ್ರೈಸಸ್, ಲೋಕಾಯತ ಪ್ರಕಾಶನ, ಲೈಟ್ ರೂಮ್ ಬುಕ್‌ಸ್ಟೋರ್, ಹಿಮಾಂಶು ಬುಕ್ ಡಿಪೋ, ಫಂಕಿ ರೇನ್‌ಬೋ, ಕ್ರಿಯೇಟಿವ್ ಲರ್ನಿಂಗ್ Aids, ಜ್ಞಾನಜಗರ್, ನಂದಾ ಎಂಟರ್‌ಪ್ರೈಸಸ್, ಆಟ ಗಲಾಟ, ಬುಕ್‌ವರ್ಮ್ ಲೈಬ್ರರಿ, ಯುರೇಕಾ ಬುಕ್ಸ್, ಕಹಾನಿ ಟ್ರೀ, ಟ್ರೈಲಜಿ ಸೇರಿವೆ.

ಕೆಲವು ಪ್ರಮುಖ ಶಾಲೆಗಳೆಂದರೆ ಅಮಿತಿ ಇಂಟರ್ನ್ಯಾಷನಲ್ ಸ್ಕೂಲ್, ದೆಹಲಿ ಪಬ್ಲಿಕ್ ಸ್ಕೂಲ್, ದಿ ಹೆರಿಟೇಜ್ ಸ್ಕೂಲ್, ಏರ್ ಫೋರ್ಸ್ ಸ್ಕೂಲ್, ಸನ್‌ಬೀಮ್ ಲಹರ್ತಾರಾ, ಮದರ್ಸ್ ಪ್ರೈಡ್, ಸೇಥ್ ಎಂ ಆರ್ ಜೈಪುರ ಶಾಲೆ, ಅಮೃತ ವಿದ್ಯಾಲಯಂ ಮತ್ತು ಗುರುಕುಲ ಶಾಲೆ.

***ಚಿತ್ರ 1 ಮತ್ತು 2:** ರಾಜಸ್ಥಾನದಲ್ಲಿ CARITAS India ಆಯೋಜಿಸಿದ ಪೋಷಕರೊಂದಿಗೆ ಗುಂಪು ಓದುವಿಕೆ ಮತ್ತು ಕಥಾ ಸಮಯ.*

ಚಿತ್ರ 3: *ಗ್ರಂಥಾಲಯದ ಅವಧಿಯಲ್ಲಿ ಪುಸ್ತಕ ಲೋಕದಲ್ಲಿ ವಿಹರಿಸಲು ಮಕ್ಕಳು ಉತ್ಸುಕರಾಗಿರುವುದು.*
ಚಿತ್ರ 4: *ASPIRE - ಸಮುದಾಯ ಗ್ರಂಥಾಲಯ ಓದುವ ಕಾರ್ಯಕ್ರಮದಲ್ಲಿ ಕಥಾ ಸಮಯಯನ್ನು ನಡೆಸಿಕೊಡುತ್ತಿರುವ ವಿದ್ಯಾರ್ಥಿ.*
ಚಿತ್ರ 5: *ಕರ್ನಾಟಕದ ರಾಯಚೂರು ಮತ್ತು ಆಂಧ್ರಪ್ರದೇಶದ ಎಮ್ಮಿಗನೂರಿನಲ್ಲಿ ಇಂಡಿ ವಿಲೇಜ್ ಫೌಂಡೇಶನ್ ಆಯೋಜಿಸಿರುವ ಓದುವ ಕಾರ್ಯಕ್ರಮದಲ್ಲಿ ಖುಷಿಯಿಂದ ಭಾಗವಹಿಸಿರುವ ಮಕ್ಕಳು.*

ಓದುಗರ ಸೃಷ್ಟಿ, ನಾಗರಿಕರ ಸೃಷ್ಟಿ

50
ಪುಸ್ತಕಗಳ ಸೃಷ್ಟಿ ಪಾಲುದಾರಿಕೆಯಲ್ಲಿ

2,500
STEM ಗ್ರಂಥಾಲಯಗಳು ಮಹಾರಾಷ್ಟ್ರದಲ್ಲಿ

1,200
ಶಾಲೆಗಳಲ್ಲಿ 'Goa is Reading' ಕಾರ್ಯಕ್ರಮ ಮುಕ್ತಾಯ

200
ಬುಡಕಟ್ಟು ಭಾಷೆಗಳಲ್ಲಿ ಗ್ರಂಥಾಲಯಗಳು

ನಮ್ಮ ದಾನಿಗಳ ನಿರಂತರ ಬೆಂಬಲದಿಂದಾಗಿ ನಾವು ಪುಸ್ತಕಗಳನ್ನು ಸೃಷ್ಟಿಸಿ, ಪ್ರಸರಣ ಮಾಡಿದೆವು. ನಮಗೆ ದೊರೆತ ಅನುದಾನದಿಂದ, ಭಾರತದ ಅತ್ಯುತ್ತಮ ಸೃಜನಶೀಲರೊಂದಿಗೆ ಇನ್ನಷ್ಟು ರಂಜನೀಯ ಕತೆಗಳನ್ನು ಪ್ರಕಟಿಸಲು ಸಾಧ್ಯವಾಯಿತು. ಹಲವಾರು ಅನುವಾದ ಯೋಜನೆಗಳನ್ನು ಕೈಗೊಂಡೆವು. ದೇಶಾದ್ಯಂತ ಇನ್ನೂ ಹೆಚ್ಚಿನ ಮಕ್ಕಳಿಗೆ ನಮ್ಮ ಪುಸ್ತಕಗಳು ತಲುಪುವಂತೆ ಮಾಡಿದೆವು. ಇಂದಿನ ಓದುಗನೇ ನಾಳಿನ ಜವಾಬ್ದಾರಿಯುತ ಮತ್ತು ಚಿಂತನಶೀಲ ನಾಗರಿಕ ಎನ್ನುವುದು ನಮ್ಮ ನಂಬಿಕೆ. ಈ ನಂಬಿಕೆಯ ಪೂರೈಕೆಗಾಗಿ ದಾನಿಗಳ ಔದಾರ್ಯದಿಂದ ನಮ್ಮ ವೈವಿಧ್ಯಮಯ ಪುಸ್ತಕಗಳನ್ನು ಇನ್ನಷ್ಟು ಓದುಗರಿಗೆ ತಲುಪಿಸಿದೆವು.

ಮುಂಬಯಿಯ ಬಿಎಂಸಿ ಶಾಲೆಗಳು ಮತ್ತು ಮಹಾರಾಷ್ಟ್ರದ ಛತ್ರಪತಿ ಸಂಭಾಜಿ ನಗರದಲ್ಲಿರುವ ಜಿಲ್ಲಾ ಪರಿಷತ್ ಶಾಲೆಗಳಿಗೆ 2,500ಕ್ಕೂ ಹೆಚ್ಚು STEM ಗ್ರಂಥಾಲಯಗಳನ್ನು ವಿತರಿಸಲು ಕ್ಯಾಟರ್‌ಪಿಲ್ಲರ್ ಸಂಸ್ಥೆ ಬೆಂಬಲ ನೀಡಿತು. ಇದರಿಂದಾಗಿ 300,000ಕ್ಕೂ ಹೆಚ್ಚು ಮಕ್ಕಳಿಗೆ ಅನುಕೂಲವಾಯಿತು. ಇದು ಈ ವರ್ಷ ದೊರೆತ ಅತಿದೊಡ್ಡ ಅನುದಾನಗಳಲ್ಲೊಂದು.

UST ಗ್ಲೋಬಲ್ ವೆಲ್ಫೇರ್ ಫೌಂಡೇಶನ್ ಕೊಯಂಬತ್ತೂರಿನ ಕರಮಡೈನ ಸರ್ಕಾರಿ ಶಾಲೆಗಳಲ್ಲಿ 100 ಗ್ರಂಥಾಲಯಗಳ ಸ್ಥಾಪನೆಗೆ ಬೆಂಬಲ ನೀಡಿತು. ಇದರಿಂದಾಗಿ ಉತ್ತಮ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳು ಇನ್ನಷ್ಟು ಕಡೆ ತಲುಪಿದವು.

ಬೆಂಗಳೂರಿನಲ್ಲಿ, ಶಾಪಿಫೈ ಕಾಮರ್ಸ್ ಇಂಡಿಯಾ ಆನೇಕಲ್‌ನ ಸರ್ಕಾರಿ ಶಾಲೆಗಳಲ್ಲಿ 185 ಗ್ರಂಥಾಲಯಗಳ ಸ್ಥಾಪನೆಗೆ ನೆರವು ನೀಡಿತು. ಇದು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶೈಕ್ಷಣಿಕ ಸಾಮಗ್ರಿಗಳು ಸಿಗುವ ಅವಕಾಶವನ್ನು ಹೆಚ್ಚಿಸಿದೆ.

ಕ್ಲೌಡೇರಿಯಾ ಡಾಟಾ ಫ್ಲಾಟ್‌ಫಾರಂ, ಭಾರತ ಇವರೊಂದಿಗಿನ ನಮ್ಮ ಹೊಸ ಸಹಯೋಗವು ಬೆಂಗಳೂರಿನ ಸರ್ಕಾರಿ ಶಾಲೆಗಳಲ್ಲಿ 93 ಗ್ರಂಥಾಲಯಗಳನ್ನು ಸ್ಥಾಪಿಸಲು ಕಾರಣವಾಯಿತು.

ಎಚ್ ಟಿ ಪಾರೇಖ್ ಫೌಂಡೇಶನ್ ತಮ್ಮ DoorBeen ಉಪಕ್ರಮದ ಮೂಲಕ ಅಸ್ಸಾಂ, ಛತ್ತೀಸ್‌ಗಢ ಮತ್ತು ಗುಜರಾತ್‌ಗಳಲ್ಲಿ ಮಕ್ಕಳ ಪುಸ್ತಕಗಳ ಅನುವಾದ, ರಚನೆ ಮತ್ತು ಪ್ರಸರಣಕ್ಕೆ ನೀಡಿದ ಬೆಂಬಲದಿಂದಾಗಿ ಈ ಪ್ರದೇಶಗಳಲ್ಲಿ ಗ್ರಂಥಾಲಯಗಳು ಮತ್ತು ಮಕ್ಕಳ ಸಾಹಿತ್ಯ ಶ್ರೀಮಂತವಾಯಿತು. ಇದು ಮಾತೃಭಾಷೆಯಲ್ಲಿ ಪುಸ್ತಕಗಳನ್ನು ಒದಗಿಸಬೇಕೆಂಬ ನಮ್ಮ ಪ್ರಯತ್ನಕ್ಕೆ ಒದಗಿದ ಬಹಳ ದೊಡ್ಡ ಬೆಂಬಲ.

ಎನ್ಫೈಸ್ ಸೋಲಾರ್ ಎನರ್ಜಿಯೊಂದಿಗಿನ ಸತತ ಎರಡನೇ ವರ್ಷದ ಸಹಯೋಗದಲ್ಲಿ ತೆಲಂಗಾಣದಲ್ಲಿ 200 ಗ್ರಂಥಾಲಯಗಳನ್ನು ಸ್ಥಾಪಿಸಲಾಯಿತು.

2012ರಿಂದ ಹಲವು ಭಾಷೆಗಳಲ್ಲಿ ಹೊಸ ವಿಷಯಗಳನ್ನು ಅಭಿವೃದ್ಧಿಪಡಿಸಲು PANI ಫೌಂಡೇಶನ್ ನಮಗೆ ಸಹಾಯ ಮಾಡುತ್ತಿದೆ. ಈ ವರ್ಷವೂ ಅವರೊಂದಿಗಿನ ಸಹಯೋಗದಲ್ಲಿ ಐದು ಭಾಷೆಗಳಲ್ಲಿ ಮೂರು ಹೊಸ ಕತೆಗಳನ್ನು ರೂಪಿಸಿದ್ದೇವೆ.

ಟಾಟಾ ಟ್ರಸ್ಟ್ 2012ರಿಂದ ನಮ್ಮ ಮೌಲ್ಯಯುತ ಸಹಭಾಗಿಯಾಗಿದ್ದು, ಈ ಸಲ ಕನ್ನಡದಲ್ಲಿ ಎರಡು, ಮರಾಠಿಯಲ್ಲಿ ಮೂರು ಒಟ್ಟು ಐದು ಹೊಸ ಕತೆಗಳನ್ನು ರೂಪಿಸಲು ಬೆಂಬಲ ನೀಡಿದೆ. ಈ ನೆರವಿನಿಂದ 30,000 ಪ್ರತಿಗಳ ಮುದ್ರಣ ಮಾಡಿ, ಶಾಲಾಮಕ್ಕಳಿಗೆ ಪ್ರಸರಣ ಮಾಡಲಾಯಿತು.

ನವೆಂಬರ್ 2022ರಲ್ಲಿ ಪ್ರಾರಂಭವಾದ ಇಂಡಸ್ ಟವರ್ಸ್ ಯೋಜನೆಯು 'Goa is Reading' ಕಾರ್ಯಕ್ರಮದೊಂದಿಗೆ ಮುಕ್ತಾಯವಾಯಿತು. ಈ ಉಪಕ್ರಮವು ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವ ಗುರಿಯನ್ನು ಹೊಂದಿದ್ದು, ಎರಡು ವಿಧಾನದಲ್ಲಿ ನಡೆಯುತ್ತದೆ: ಇಂಗ್ಲಿಷ್, ಮರಾಠಿ ಮತ್ತು ಕೊಂಕಣಿಯಲ್ಲಿ ಡಿಜಿಟಲ್ ಮಾಧ್ಯಮ ಬಳಸಿ ಕತೆಗಳನ್ನು ಓದುವುದು ಒಂದು ರೀತಿಯಾದರೆ, ಮತ್ತೊಂದು 'ತರಗತಿಯಲ್ಲಿ ಗ್ರಂಥಾಲಯ (LIC Kit)' ಮಾದರಿಯಲ್ಲಿ ತರಗತಿಯಲ್ಲಿ ಓದುವ ಪರಿಸರವನ್ನು ಸೃಷ್ಟಿಸುವುದು.

ಈ ಕಾರ್ಯಕ್ರಮವು 1,200 ಶಾಲೆಗಳನ್ನು ಒಳಗೊಂಡಿದ್ದು, 2,01,600 ಕತೆಯ ಪುಸ್ತಕಗಳನ್ನು ಒದಗಿಸಲಾಯಿತು. 78,800 ವಿದ್ಯಾರ್ಥಿಗಳಿಗೆ ಬೆಂಬಲ ನೀಡಿತು. ಈ ಯೋಜನೆಯು ಶಿಕ್ಷಕರ ತರಬೇತಿ, ಸಾಮರ್ಥ್ಯವರ್ಧನೆ ಅಂತಹ ಪ್ರಯತ್ನಗಳಿಂದ ರೂಪುಗೊಂಡ ಬಹುಭಾಷಾ ಪುಸ್ತಕಗಳು, ಚಟುವಟಿಕೆಗಳ ಸಂಗ್ರಹವನ್ನು ಶಾಲೆಗಳಿಗೆ ಒದಗಿಸಿತು. ಶಿಕ್ಷಕರು, ವಿದ್ಯಾರ್ಥಿಗಳನ್ನು ಯಶಸ್ವಿಯಾಗಿ ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡು, ಓದುವ ಪ್ರೀತಿಯನ್ನು ಉತ್ತೇಜಿಸಲು ಡಿಜಿಟಲ್ ವೇದಿಕೆ ಹಾಗೂ ಮುದ್ರಿತ ಪುಸ್ತಕ ಎರಡನ್ನೂ ಬಳಸಿಕೊಂಡಿತು.

ಚಿತ್ರ 1: *ಬೆಂಗಳೂರಿನ ಆನೇಕಲ್‌ನಲ್ಲಿರುವ ಸರ್ಕಾರಿ ಶಾಲೆಗಳಿಗೆ ಪ್ರಥಮ್ ಬುಕ್ಸ್‌ನ ಗ್ರಂಥಾಲಯವನ್ನು ಒದಗಿಸಿರುವುದು.*
ಚಿತ್ರ 2: *ಗುಜರಾತ್‌ನ ವನಕಲ್‌ನಲ್ಲಿರುವ ಸರ್ಕಾರಿ ಶಾಲೆಯ ಮಕ್ಕಳಿಗೆ ಓದಿನ ಆನಂದ ಸಿಗಲಿ ಎಂದು 'ತರಗತಿಯಲ್ಲಿ ಗ್ರಂಥಾಲಯ' ಒದಗಿಸಿರುವುದು.*

ಚಿತ್ರ 3: *ಅಸ್ಸಾಂನ ನಾಗಾಂವ್ ಜಿಲ್ಲೆಯಲ್ಲಿ ಕಥಾ ಕಾನನ್ ಗ್ರಂಥಾಲಯದ ಮಕ್ಕಳು ತಮ್ಮ ಹೊಸ ತರಗತಿ ಗ್ರಂಥಾಲಯದೊಂದಿಗೆ.*

ಚಿತ್ರ 4: *ಸ್ನೇಹಜೋರಿಯಿಂದ ಬೆಂಬಲಿತವಾದ ಅಸ್ಸಾಂನ ಕಾಮರೂಪ (ಮೆಟ್ರೋಪಾಲಿಟನ್) ಜಿಲ್ಲೆಯ ಶಾಲೆಗಳು ಮತ್ತು ಸಮುದಾಯಗಳ ಮಕ್ಕಳು ಪ್ರಥಮ್ ಬುಕ್ಸ್ ಗ್ರಂಥಾಲಯವನ್ನು ಪಡೆದ ಖುಷಿಯಲ್ಲಿರುವುದು.*

ಪ್ರಥಮ್ ಬುಕ್ಸ್‌ನ ಎರಡು ದಶಕಗಳ ಸಂಭ್ರಮಾಚರಣೆ

ಜನವರಿ 2004ರಲ್ಲಿ "ಪ್ರತಿ ಮಗುವಿನ ಕೈಯಲ್ಲಿ ಪುಸ್ತಕ" ಎನ್ನುವ ಕಲ್ಪನೆಯೊಂದಿಗೆ ಪ್ರಥಮ್ ಬುಕ್ಸ್ ಮಕ್ಕಳ ಪ್ರಕಾಶನ ಉದ್ಯಮದಲ್ಲಿ ತನ್ನ ಪಯಣವನ್ನು ಆರಂಭಿಸಿತು. ಸಂಸ್ಥೆಯ ಸಂಸ್ಥಾಪಕಿ ರೋಹಿಣಿ ನಿಲೇಕಣಿ ಹೇಳುವಂತೆ, "ನಾವು ಎಲ್ಲ ಮಕ್ಕಳಿಗೂ ಓದುವ ಖುಷಿಯನ್ನು ಹಂಚಲು ಬಯಸಿದೆವು. ಎಲ್ಲ ಭಾಷೆಗಳಲ್ಲಿ ಸಾಧ್ಯವಾದಲ್ಲಿ ಸ್ಥಳೀಯ ವಿಷಯಗಳನ್ನು ಒಳಗೊಂಡ ಅದ್ಭುತವಾದ ಪುಸ್ತಕಗಳನ್ನು ರೂಪಿಸಲು ಬಯಸಿದೆವು. ನಾವು ಅದನ್ನು ಸಾಧಿಸಿದೆವು!"

ಎರಡು ದಶಕಗಳ ಸಮರ್ಪಣೆ

ಕಳೆದ 20 ವರ್ಷಗಳಿಂದ, ಪ್ರಪಂಚದಾದ್ಯಂತ ಮಕ್ಕಳಿಗೆ ವರ್ಣಮಯವಾದ ಓದುವ ಪರಿಸರವನ್ನು ಒದಗಿಸುವುದು ನಮ್ಮ ಗುರಿಯಾಗಿದೆ. ಈ ಪಯಣದಲ್ಲಿ ತಮ್ಮ ಸಮರ್ಪಣಾಭಾವ, ಪ್ರೀತಿ, ಸೃಜನಶೀಲತೆಯೊಂದಿಗೆ ನಮ್ಮ ಪಾಲುದಾರರಾದ ಲೇಖಕರು, ಅನುವಾದಕರು, ಚಿತ್ರಕಾರರು, ಶಿಕ್ಷಕರು, ಗ್ರಂಥಪಾಲಕರು, ಪೋಷಕರು, ದಾನಿಗಳು, ರೀಡಿಂಗ್ ಚಾಂಪಿಯನ್ಸ್ ನಮ್ಮೊಂದಿಗಿದ್ದಾರೆ.

ನಮ್ಮ ಪ್ರಕಟಿತ ಪುಸ್ತಕಗಳ ಪಟ್ಟಿ ನಮ್ಮ ಯಶಸ್ಸಿನ ಬಗ್ಗೆ ಹೇಳುತ್ತದೆ. ಸಹ ಸಂಸ್ಥಾಪಕರಾದ ಅಶೋಕ್ ಕಾಮತ್ ಪ್ರೀತಿಯಿಂದ ಹೀಗೆ ನೆನಪಿಸಿಕೊಳ್ಳುತ್ತಾರೆ:

"2004ರಲ್ಲಿ ಪ್ರಕಟವಾದ ನಮ್ಮ ಮೊದಲ ಪುಸ್ತಕಗಳು ಈವರೆಗೆ ಕನಿಷ್ಠ ಅಂದರೂ ಡಜನ್‌ಗೂ ಹೆಚ್ಚು ಸಲ ಮರುಮುದ್ರಣಗೊಂಡಿವೆ. ಸಾವಿರಾರು ಮಕ್ಕಳಿಗೆ ಅದೇ ಅವರ ಮೊದಲ ಪುಸ್ತಕವಾಗಿದೆ. ಎಲ್ಲರ ಕೈಗೆ ಎಟುಕಲಿ ಎನ್ನುವ ಉದ್ದೇಶದೊಂದಿಗೆ ಕೇವಲ ಐದು ರೂಪಾಯಿ ಬೆಲೆಯನ್ನು ಇಟ್ಟೆವು."

ಕತೆಗಳೊಂದಿಗೆ ಎಲ್ಲೆಗಳನ್ನು ಮೀರುವುದು

ಬಹುಭಾಷೆಗಳಲ್ಲಿರುವ ಎಲ್ಲವನ್ನೂ ಒಳಗೊಳ್ಳುವ ಕಲ್ಪನೆಯ ಆಧಾರದ ಮೇಲೆ ರೂಪುಗೊಂಡಿರುವ ಪ್ರಥಮ್ ಬುಕ್ಸ್ ಪುಸ್ತಕಗಳು ಮಿಲಿಯನ್‌ಗಟ್ಟಲೆ ಮಕ್ಕಳನ್ನು ತಲುಪಿವೆ. ಬಹಳ ಯೋಚಿಸಿ ರೂಪಿಸಲಾಗಿರುವ ಚಿತ್ರಪುಸ್ತಕಗಳು, ತರಗತಿಯ ಗ್ರಂಥಾಲಯಗಳ ಮೂಲಕ ನಾವು ದೂರದ ಹಳ್ಳಿ, ಬೆಟ್ಟದಲ್ಲೆಲ್ಲೋ ಇರುವ ಶಾಲೆಗಳು, ಬುಡಕಟ್ಟು ಸಮುದಾಯಗಳ ಮಕ್ಕಳಿಗೂ ಓದುವ ಖುಷಿಯನ್ನು ಹಂಚಿದ್ದೇವೆ.

ನಮ್ಮ ಟ್ರಸ್ಟಿ ಸುಝೇನ್ ಸಿಂಗ್ ಹೇಳುವಂತೆ, "ಪ್ರಥಮ್ ಬುಕ್ಸ್ ಬಹುಭಾಷಿಕ, ಕೈಗೆಟಕುವ ಬೆಲೆಯಿರುವ, ಎಲ್ಲರಿಗೂ ಮುಕ್ತವಿರುವ ಪುಸ್ತಕಗಳ ಮೂಲಕ ವಿಶಿಷ್ಟ ಪ್ರಕಾಶನ ಮಾದರಿಯನ್ನು ಹುಟ್ಟುಹಾಕಿದೆ. ಪ್ರಪಂಚದಾದ್ಯಂತ ಮಿಲಿಯನ್‌ಗಟ್ಟಲೇ ಮಕ್ಕಳು ನಮ್ಮ ಪುಸ್ತಕಗಳನ್ನು ಉಚಿತವಾಗಿ ಪಡೆಯಬಹುದು."

ನಮ್ಮ ಹೊಸತನದೆಡೆಗಿನ ಹುಡುಕಾಟಗಳು ಇಷ್ಟಕ್ಕೆ ನಿಲ್ಲಲಿಲ್ಲ. ನಮ್ಮ ಡಿಜಿಟಲ್ ವೇದಿಕೆಯಾದ ಸ್ಟೋರಿವೀವರ್, ಜಾಗತಿಕವಾಗಿ ಎಲ್ಲರಿಗೂ ಕತೆಗಳು ಸಿಗುವ ಸಾಧ್ಯತೆಗಳನ್ನು ಬದಲಿಸಿದೆ. ಸಹ-ಸಂಸ್ಥಾಪಕಿ ರೇಖಾ ಮೆನನ್ ಹೇಳುವಂತೆ, "ಸಾಮಾಜಿಕ ಒಳಿತಿಗಾಗಿ ತಂತ್ರಜ್ಞಾನವನ್ನು ಬಳಸುವ ಶಕ್ತಿಯನ್ನು ನಾವು ಮೊದಲೇ ಗುರುತಿಸಿದ್ದೇವೆ." ಇಂದು, ಸ್ಟೋರಿವೀವರ್ ಸಾಕ್ಷರತೆ ಮತ್ತು ಕಲಿಕೆಗೆ ಇರುವ ಅಡೆತಡೆಗಳನ್ನು ಮೀರಿ ಬಹುಭಾಷೆಗಳಲ್ಲಿ ಲಕ್ಷಾಂತರ ಓದುಗರನ್ನು ತಲುಪುತ್ತದೆ.

ಓದುವ ಮೂಲಕ ಜೀವನ ಪರಿವರ್ತನೆ

ಕಳೆದ ಎರಡು ದಶಕಗಳಲ್ಲಿ ಕಲ್ಪನೆಗೆ ಕಿಡಿ ಹೊತ್ತಿಸುವಲ್ಲಿ, ಸಹಾನುಭೂತಿ ಬೆಳೆಸುವಲ್ಲಿ, ಜೀವನಪರ್ಯಂತ ಓದುವ ಪ್ರೀತಿಯನ್ನು ಉಳಿಸುವಲ್ಲಿ ಕತೆಗಳಿಗಿರುವ ಪರಿವರ್ತಕ ಶಕ್ತಿಗೆ ನಾವು ಸಾಕ್ಷಿಯಾಗಿದ್ದೇವೆ. ನಮ್ಮ ಚೇರ್ ಪರ್ಸನ್ ಆರ್ ಶ್ರೀರಾಮ್ ಕೊಡುಗೆಯನ್ನು ಹೀಗೆ ಸ್ಮರಿಸಿಕೊಳ್ಳುತ್ತಾರೆ;

“ನಮ್ಮ ಧ್ಯೇಯವನ್ನು ಸಾಧಿಸಲು ನೆರವಾದ ಲೇಖಕರು, ಚಿತ್ರಕಾರರು, ಅನುವಾದಕರು, ಸ್ವಯಂಸೇವಕರು, ಪಾಲುದಾರರು, ದಾನಿಗಳು ಮತ್ತು ಬೆಂಬಲಿಗರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ನಿಮ್ಮ ಕೊಡುಗೆಗಳಿಂದಾಗಿ ಜಗತ್ತಿನಾದ್ಯಂತ ಸೌಲಭ್ಯ ವಂಚಿತ ಮಕ್ಕಳನ್ನು ತಲುಪಲು ನಮಗೆ ಸಾಧ್ಯವಾಗಿದೆ.”

ಭವಿಷ್ಯ ನಮ್ಮ ಮೌಲ್ಯಗಳಲ್ಲಿ ಬೇರೂರಿದೆ

ಜಗತ್ತು ಮಿಂಚಿನ ವೇಗದಲ್ಲಿ ಬದಲಾಗುತ್ತಿದ್ದರೂ, ನಮ್ಮ ಸಂಸ್ಥೆಯ ಮೂಲಭೂತ ಸಂಗತಿಗಳು ಬದಲಾಗಿಲ್ಲ: ನಮ್ಮ ಧ್ಯೇಯ, ಮೌಲ್ಯಗಳು, ಹೊಸತನದೆಡೆಗಿನ ಬದ್ಧತೆ ಹಾಗೇ ಇವೆ. ಇಂದಿಗೂ ಪ್ರಥಮ್ ಬುಕ್ಸ್ ಸಹಯೋಗ, ಒಳಗೊಳ್ಳುವಿಕೆ, ಸೃಜನಶೀಲತೆ ಮತ್ತು ಸಹಾನುಭೂತಿಯ ಪರವಾಗಿದೆ.

ಪುಸ್ತಕಗಳ ಪರಿವರ್ತಕ ಶಕ್ತಿಯ ಅನುಭವದಿಂದ ಯಾವ ಮಗುವೂ ವಂಚಿತವಾಗದಂತೆ ನೋಡಿಕೊಳ್ಳುತ್ತಾ ನಾವು ಒಟ್ಟಾಗಿ ಮುಂದುವರಿಯುತ್ತೇವೆ.



ದಾನಿಗಳು

Azim Premji University

P·A·N·I Foundation
giving hope a chance

[e] enphase ENERGY

KEMIN
Compelled by Curiosity™

unicef
for every child

UST

indus TOWERS

Vereint für eine bessere Zukunft
Nitya Bal Vikas Deutschland e.V.

H T Parekh FOUNDATION

TATA TRUSTS

CLOUDERA

ದಾನಿಗಳು

ಅಧ್ಯಯನ್ ಕ್ವಾಲಿಟಿ ಎಜುಕೇಶನ್ ಫೌಂಡೇಶನ್

ಆಶಾಜ್ಯೋತಿ ಯುಎಸ್ಎ ಇಂಕ್

ಬ್ರೈಟ್ ಫಂಡ್

ಎಜುಕೇಶನ್ ಅಬೋವ್ ಆಲ್ (EAA)

ಎಜುಕೇಶನ್ ಇನಿಶಿಯೇಟಿವ್ಸ್ ಪ್ರೈವೇಟ್ ಲಿಮಿಟೆಡ್

ಫಿಡೆಲಿಟಿ ಏಷ್ಯಾ ಪೆಸಿಫಿಕ್ ಫೌಂಡೇಶನ್

ಗಿವ್ ಫೌಂಡೇಶನ್

ಗಿವ್ ಫೌಂಡೇಶನ್ ಇಂಕ್, ಯುಎಸ್ಎ

ಜಾಸ್ಮಿನ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್

ಕಿಂಗ್ ಬೌಡೌಯಿನ್ ಫೌಂಡೇಶನ್

ಕ್ಯಾಟರ್ ಪಿಲ್ಲರ್ ಇಂಡಿಯಾ ಎಂಜಿನಿಯರಿಂಗ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್

ಲೈಫರೇರಿಯನ್ ಅಸೋಸಿಯೇಷನ್

ನವನೀತ್ ಫೌಂಡೇಶನ್

ಎನ್‌ಡಿಆರ್ ಇನ್ವಿಟ್ ಮ್ಯಾನೇಜರ್ಸ್

ಪರ್ಸಿಸ್ಟೆಂಟ್ ಫೌಂಡೇಶನ್

ಸೌರಮಂಡಲ ಫೌಂಡೇಶನ್

ಶಾಪಿಫೈ ಕಾಮರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್

ದಿ ಆನ್‌ಲೈನ್ ಗಿವಿಂಗ್ ಫೌಂಡೇಶನ್

ಯುಕ್ಯಾಟಪಲ್ಟ್ ಫೌಂಡೇಶನ್

ಯುಕೆ ಆನ್‌ಲೈನ್ ಗಿವಿಂಗ್ ಫೌಂಡೇಶನ್

ಯುನೈಟೆಡ್ ವೇ ಬೆಂಗಳೂರು

2023-2024ರ ವೈಯಕ್ತಿಕ ದಾನಿಗಳ ಪಟ್ಟಿ

ಓದುವ ಆನಂದವನ್ನು ಹರಡುವ ನಮ್ಮ ಪ್ರಯತ್ನಗಳಲ್ಲಿ ನೀವು ನಮ್ಮೊಂದಿಗೆ ಪಾಲುದಾರರಾಗಲು ಬಯಸಿದರೆ, ದಯವಿಟ್ಟು ಇಲ್ಲಿಗೆ ಬರೆಯಿರಿ

grants@prathambooks.org

ಹಣಕಾಸು ವರದಿಗಳು

Pratham Books

Balance sheet as at March 31, 2024

(Amount in Rupees)

Particulars	Sch No.	As at March 31, 2024 Amount	As at March 31, 2023 Amount
Liabilities			
Corpus Fund	1	11,47,17,119	10,11,68,543
Specified Fund	2	73,66,019	5,03,01,352
Current Liabilities	3	1,60,15,456	1,55,66,256
Provisions	4	46,26,718	41,07,473
Other advances	5	21,65,806	6,20,586
Total		**14,48,91,118**	**17,17,64,209**
Assets			
Fixed Assets	6	19,80,392	24,41,933
Deposits	7	8,46,43,096	9,63,56,774
Debtors	8	34,70,991	29,94,427
Loans and advances	9	23,06,917	10,57,771
Stock of Books		83,22,808	63,92,640
Cash in Hand		13,762	13,440
Cash at Bank	10	4,44,69,456	5,59,18,084
Specified Fund Receivable	11	1,30,000	2,60,003
Other Current Assets	12	3,31,696	63,29,737
Total		**14,48,91,118**	**17,17,64,209**

Significant Accounting Policies and notes to accounts 30

for Pratham Books

R Sriram
Chairperson

Suparna Singh
Trustee

Bengaluru
September 20, 2024

As per our report of even date
for Singhvi Dev & Unni LLP
Chartered Accountants
Firm Reg No 003867S/S200358

Shashi Kumar H D
Partner
Membership No.: 235431
UDIN: 24235431BKEMXC5342

Bengaluru
September 20, 2024

Pratham Books

Income & Expenditure for the year ended March 31, 2024

(Amount in Rupees)

Particulars	Sch No.	As at March 31, 2024 Amount	As at March 31, 2023 Amount
Income			
Sale of Books	13	8,78,87,601	7,22,51,678
Donations received	14	59,15,192	79,73,670
Other Income	15	87,22,965	76,56,613
Income from Funds	16	4,48,99,969	7,96,43,198
Total (A)		**14,74,25,727**	**16,75,25,159**
Expenditure			
Book Development Expenses	17	2,91,23,267	2,80,32,882
Selling & Administrative Expenses	18	2,27,51,808	1,94,58,433
Staff Expenses	19	3,69,18,922	2,47,53,402
Promotional Expenses	20	2,47,544	3,94,861
Depreciation	6	5,97,823	4,37,604
Fund Expenditure	21	8,67,17,139	10,06,12,911
Total (B)		**17,62,96,500**	**17,38,90,094**
Excess of Income over expenditure (A-B)		(2,88,70,773)	(63,64,935)
Add:			
Opening Balance in Funds			
Opening Balance in Corpus Fund		10,11,68,543	8,59,63,766
Opening Balance in Specified Fund		5,03,01,352	7,17,36,207
Balance of Funds after appropriations			
Corpus Fund		11,47,17,120	10,11,68,543
Specified Fund		73,66,019	5,03,01,352
Total balance in Funds		**12,20,83,139**	**15,14,69,895**

Significant Accounting Policies and notes to accounts 30

for Pratham Books

R Sriram
Chairperson

Suparna Singh
Trustee

Bengaluru
September 20, 2024

As per our report of even date
for Singhvi Dev & Unni LLP
Chartered Accountants
Firm Reg No 003867S/S200358
UDIN: 24235431BKEMXC5342

Shashi Kumar H D
Partner
Membership No.: 235431
UDIN: 24235431BKEMXC5342

Bengaluru
September 20, 2024

ಹಣಕಾಸು ವರದಿಗಳು



Pratham Books

Receipts and Payments account for the year ended March 31, 2024

(Amount in Rupees)

Particulars	Sch No	Year ended March 31, 2024 Amount	Year ended March 31, 2023 Amount
Receipts			
Balance brought forward			
- Cash on hand		13,440	8,740
- Cash at bank		3,09,18,084	3,56,25,023
Sale of books	22	8,98,95,914	7,60,21,404
Donations	23	89,18,192	79,73,670
Other income	24	57,68,836	44,06,420
Specified Funds	25	4,68,22,888	7,90,20,218
Fixed Deposits - Withdrawn		19,03,31,224	11,57,24,894
Gratuity Fund (LIC)		1,42,213	-
Earnest Money Refund Received		-	72,141
Income Tax Refund - Received (TDS)		-	13,20,281
Total		**40,58,08,872**	**34,29,72,396**
Payments			
Book Development Expenses	26	3,68,14,910	3,06,72,715
Selling, Administrative Expenses and Promotional Expenses	27	3,23,51,149	1,97,08,201
Staff Expenses	28	3,94,13,621	3,35,82,798
Fund Expenditure	29	9,14,42,264	9,88,75,430
Fixed Assets Purchased		3,06,960	8,27,935
Fixed Deposits		18,76,17,647	11,13,88,819
Gratuity- LIC Policy		10,00,000	13,14,641
Specific Grant Balance Refund		1,75,302	7,24,246
Earnest Money/Security Deposit		-	61,000
Balance carried forward			
- Cash on hand		15,743	13,440
- Cash at bank		4,64,69,456	3,09,18,084
Total		**40,58,08,872**	**34,29,72,396**
Significant Accounting Policies and notes to accounts	30		

for Pratham Books

[illegible]
Chairperson

[illegible]
Trustee

Bengaluru
September 20, 2024

UDIN: [illegible]
As per our report of even date
for Singhvi Dev & Unni LLP
Chartered Accountants
Firm Reg No [illegible]

Shashi Kumar H D
Partner
Membership No.: 235431
UDIN: [illegible]

Bengaluru
September 20, 2024

ಟ್ರಸ್ಟಿಗಳ ಮಂಡಳಿ

ಹೆಸರು	ಸ್ಥಾನ	ಭಾಗವಹಿಸಿದ ಮಂಡಳಿಯ ಸಭೆಗಳ ಸಂಖ್ಯೆ	ಟ್ರಸ್ಟಿಗಳು ಪಡೆದ ಸಂಭಾವನೆ / ಮರುಪಾವತಿಗಳು
ಅಶೋಕ್ ಕಾಮತ್	ಟ್ರಸ್ಟಿ	4	ಶೂನ್ಯ
ಹರಿತ್ ನಾಗ್‌ಪಾಲ್	ಟ್ರಸ್ಟಿ	3	ಶೂನ್ಯ
ಮೀನಾಕ್ಷಿ ರಮೇಶ್	ಟ್ರಸ್ಟಿ	1	ಶೂನ್ಯ
ಎಂ ಎಸ್ ಶ್ರೀರಾಮ್	ಟ್ರಸ್ಟಿ	3	ಶೂನ್ಯ
ಪರ್ವೀನ್ ವರ್ಮಾ	ಟ್ರಸ್ಟಿ	2	ಶೂನ್ಯ
ಶ್ರೀಕಾಂತ್ ನಾದಮುನಿ	ಟ್ರಸ್ಟಿ	2	ಶೂನ್ಯ
ಸುರ್ಯೋನ್ ಸಿಂಗ್	ಟ್ರಸ್ಟಿ	3	ಶೂನ್ಯ
ಆರ್ ಶ್ರೀರಾಮ್	ಚೇರ್ ಪರ್ಸನ್ ಮತ್ತು ಕಾರ್ಯನಿರ್ವಾಹಕ ಟ್ರಸ್ಟಿ	4	ಶೂನ್ಯ

ಟ್ರಸ್ಟಿಗಳು ವರ್ಷವಿಡೀ ಸಂಸ್ಥೆಯ ವಿವಿಧ ಅಂಶಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಂಡು ಬೆಂಬಲಿಸುತ್ತಾರೆ.

ಅಶೋಕ್ ಕಾಮತ್ ಪ್ರಥಮ್ ಬುಕ್ಸ್ ಪ್ರಾರಂಭವಾದಾಗಿನಿಂದ ಸಹ-ಸ್ಥಾಪಕ ಟ್ರಸ್ಟಿಯಾಗಿ ಸಂಸ್ಥೆಯ ಪ್ರಮುಖ ಭಾಗವಾಗಿದ್ದಾರೆ. ಅವರು ಅಕ್ಷರ ಫೌಂಡೇಶನ್ ಮುನ್ನಡೆಸುತ್ತಿದ್ದಾರೆ. ಭಾರತದಲ್ಲಿ ಶಿಕ್ಷಣದ ಅಸಮಾನತೆಗಳನ್ನು ಪರಿಹರಿಸುವ ಪ್ರಯತ್ನಗಳಲ್ಲಿ ಆಳವಾಗಿ ತೊಡಗಿಸಿಕೊಂಡಿದ್ದಾರೆ. ಅಭಿವೃದ್ಧಿಯ ಬದಲಾವಣೆಗೆ ಸಮರ್ಥನೀಯ ಮಾದರಿಗಳನ್ನು ನಿರ್ಮಿಸಲು, ಚಾಲನೆ ನೀಡಲು ರಾಜ್ಯದ ನಾಯಕತ್ವದಿಂದ ತಳಮಟ್ಟದವರೆಗೆ ಸರ್ಕಾರದ ಎಲ್ಲಾ ಹಂತಗಳೊಂದಿಗೆ ಹೇಗೆ ತೊಡಗಿಸಿಕೊಳ್ಳಬೇಕು ಎಂದು ಅಶೋಕ್ ತಿಳಿದಿದ್ದಾರೆ.

ಹರಿತ್ ನಾಗ್‌ಪಾಲ್ ನಮ್ಮ ಧ್ಯೇಯೋದ್ದೇಶವನ್ನು ಮುಂದುವರಿಸಲು ನೆಲದ ವಾಸ್ತವತೆ, ಬಳಕೆದಾರರ ತಿಳಿವಳಿಕೆಯೊಂದಿಗೆ ನಮ್ಮ ವ್ಯಾಪ್ತಿಯನ್ನು ಬೆಸೆಯಲು ಮುಖ್ಯವಾಹಿನಿಯ ವ್ಯಾಪಾರ ತಿಳಿವಳಿಕೆ, ಭಾರತದಾದ್ಯಂತ ಕಾರ್ಯಾಚರಣೆಗಳ ಅನುಭವವನ್ನು ತರುತ್ತಾರೆ.

ಪರ್ವೀನ್ ವರ್ಮಾ CRY ಸಂಸ್ಥೆಯ ಮಾಜಿ ಮುಖ್ಯಸ್ಥೆ. ತಮ್ಮ ವೃತ್ತಿಜೀವನವನ್ನು ಮಕ್ಕಳಿಗಾಗಿ ಕೆಲಸ ಮಾಡುವ ಉದ್ದೇಶಗಳಿಗಾಗಿ ಮುಡಿಪಾಗಿಟ್ಟಿದ್ದಾರೆ. ನಾಯಕತ್ವ ಅಭಿವೃದ್ಧಿ ಮತ್ತು ಸಂಸ್ಥೆ ನಿರ್ಮಾಣದಲ್ಲಿ ಅವರ ನೈಪುಣ್ಯತೆ ಮತ್ತು ಒಳನೋಟಗಳ ಜೊತೆಗೆ, ಮಕ್ಕಳ ಅಗತ್ಯಗಳ ಬಗ್ಗೆ ಅವರಿಗೆ ಅಗತ್ಯವಾದ ಸಹಾನುಭೂತಿ ಮತ್ತು ಆಳವಾದ ತಿಳಿವಳಿಕೆ ಇದೆ.

ರೇಖಾ ಮೆನನ್ ಸ್ಥಾಪಕ ಟ್ರಸ್ಟಿಗಳಲ್ಲಿ ಒಬ್ಬರು. ಎರಡು ಉದ್ದೇಶಗಳನ್ನು ಸಂಯೋಜಿಸುವ ಕಾರ್ಪೊರೇಟ್‌ನಂತೆ ಸಂಘಟಿತರಾಗಿದ್ದಾರೆ. ಯಾವಾಗಲೂ ವಿಶಾಲ ದೃಷ್ಟಿಕೋನ, ದೊಡ್ಡ ಪ್ರಭಾವದ ಬಗ್ಗೆ ಯೋಚಿಸುತ್ತಾರೆ.

ಮೀನಾಕ್ಷಿ ರಮೇಶ್ ಯುನೈಟೆಡ್ ವೇ ಚೆನ್ನೈನ ಸಿಇಒ ಮತ್ತು ಸಿಟಿಜನ್ ಮ್ಯಾಟರ್ಸ್‌ನ ಸಹ-ಸಂಸ್ಥಾಪಕಿ. 2001ರಲ್ಲಿ ಪ್ರಥಮ್ ಜೊತೆಗೆ ತಮ್ಮ ಸಾಮಾಜಿಕ ವಲಯದ ಪ್ರಯಾಣವನ್ನು ಪ್ರಾರಂಭಿಸಿದರು. ಎಂಎಸ್ ವಿಶ್ವವಿದ್ಯಾಲಯ ಬರೋಡಾ ಮತ್ತು ಐಐಎಂ ಅಹಮದಾಬಾದ್‌ನ ಹಳೆಯ ವಿದ್ಯಾರ್ಥಿನಿಯಾಗಿದ್ದು, ನಾಲ್ಕು ಎನ್‌ಜಿಒಗಳ ಮಂಡಳಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಎಂ ಎಸ್ ಶ್ರೀರಾಮ್ ಅಧ್ಯಾಪಕ ಮತ್ತು ಲೇಖಕ. ವಿಶಾಲ ವಿನ್ಯಾಸ, ಪರಿಕಲ್ಪನೆಯ ಸಮಸ್ಯೆಗಳೊಂದಿಗೆ ಟ್ರಸ್ಟ್ ನಿರ್ವಹಿಸುವ ಪ್ರಾಯೋಗಿಕ ಅಂಶಗಳನ್ನು ಸಂಯೋಜಿಸುತ್ತಾರೆ.

ಶ್ರೀಕಾಂತ್ ನಾದಮುನಿ ತಂತ್ರಜ್ಞಾನವನ್ನು ಮಕ್ಕಳ ಸನ್ನಿವೇಶಕ್ಕೆ ಹೇಗೆ ಸುರಕ್ಷಿತವಾಗಿ ಅಳವಡಿಸಿ-ಕೊಳ್ಳಬಹುದು ಎನ್ನುವುದರ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದಾರೆ. ಗಡಿ ಪ್ರದೇಶಗಳಲ್ಲಿ ಕೆಲಸ ಮಾಡಿದ್ದಾರೆ. ತಂತ್ರಜ್ಞಾನ ಮತ್ತು ನವೀನಅಪ್ಲಿಕೇಶನ್‌ಗಳ ಎಲ್ಲಾ ಅಂಶಗಳಿಗೂ go-to trustee ಆಗಿದ್ದಾರೆ.

ಸುರ್ಝೀನ್ ಸಿಂಗ್ ಚೇರ್ ಪರ್ಸನ್ ಆಗಿ ಮತ್ತು ಮ್ಯಾನೇಜಿಂಗ್ ಟ್ರಸ್ಟಿಯಾಗಿ ಸಂಸ್ಥೆಯನ್ನು ಹಲವು ವರ್ಷಗಳ ಕಾಲ ಮುನ್ನಡೆಸಿದ್ದಾರೆ. ಪ್ರಮುಖ ಕಾರ್ಯತಂತ್ರದ ನಿರ್ಧಾರಗಳೊಂದಿಗೆ ಸ್ಟೋರಿವೀವರ್ ಪರಿಚಯಿಸಿದರು. ಸಂತೋಷಕರ ಪುಸ್ತಕಗಳೊಂದಿಗೆ ಕೊನೆಯ ಮಗುವನ್ನೂ ಸಹ ತಲುಪಲು ನಿರಂತರ ಉತ್ಸಾಹದೊಂದಿಗೆ ದೃಷ್ಟಿಯನ್ನು ಮಿಷನ್ ಮೇಲೆ ಕೇಂದ್ರೀಕರಿಸಿದ್ದಾರೆ.

ಆರ್ ಶ್ರೀರಾಮ್ ಅವರು ಪುಸ್ತಕಗಳ ಮಾಂತ್ರಿಕ, ಆನಂದದಾಯಕ ಓದುವಿಕೆಗೆ ಪ್ರಜಾಸತ್ತಾತ್ಮಕ ಪ್ರವೇಶದ ಬಗ್ಗೆ ಉತ್ಸುಕರಾಗಿದ್ದಾರೆ. ವಾಣಿಜ್ಯೋದ್ಯಮಿಯಾಗಿ, ವಿವಿಧ ವ್ಯವಹಾರಗಳು, ಲಾಭರಹಿತ ಸಂಸ್ಥೆಗಳೊಂದಿಗೆ ಕೆಲಸ ಮಾಡುವ ಇವರ ಅನುಭವವು ಅವರ ಒಳನೋಟಗಳಲ್ಲಿ, ದಿಟ್ಟ ಕಾರ್ಯಸೂಚಿಯಲ್ಲಿ ಹೊಳೆಯುತ್ತದೆ. ಶ್ರೀರಾಮ್ ಪ್ರಸ್ತುತ ಚೇರ್ ಪರ್ಸನ್ ಮತ್ತು ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದಾರೆ. ನಾಯಕತ್ವ ತಂಡಕ್ಕೆ ಮಾರ್ಗದರ್ಶನ ನೀಡುತ್ತಾರೆ.

ಇಲ್ಲಸ್ಟ್ರೇಷನ್ ಕೃಪೆ

ಶೀರ್ಷಿಕೆ	ಚಿತ್ರಕಾರರು	ಲೇಖಕರು
ಮಳೆರಾಯ	ತಸ್ನೀಮ್ ಅಮಿರುದ್ದೀನ್	ಸಂಜೀವ್ ಜೈಸ್ವಾಲ್ 'ಸಂಜಯ್'
ನನ್ನ ಒಳ್ಳೆಯ ಗೆಳೆಯರು	ರಿಷಭ್ ಬನಶ್ಕಾರ್	ರಮಾ ಹರ್ಡೀಕರ್-ಸಖದೇವ್
ಅನು ಏನು ನೋಡುತ್ತಾಳೆ?	ಲಾವಣ್ಯಾ ಕಾರ್ತಿಕ್	ಲಾವಣ್ಯಾ ಕಾರ್ತಿಕ್
ಪುಟ್ಟುವಿಗೊಂದು ಬುಕ್ಕು	ರಾಜೀವ್ ಐಪ್	ದೀಪಾಂಜನಾ ಪಲ್
ನಾಣಮ್ಮಾಳ್ ಮತ್ತು ಕಮಲಾತ್ತಾಳ್ - ಸಮುದ್ರ ಯಾನ!	ಸುಶಾಂತ್ ಆಹಿರೆ	ಮೇನಕಾ ರಾಮನ್
ಮಳೆಯಲ್ಲಿ ಹಾಡೋಣ	ರಾಜೀವ್ ಐಪ್	ಮಾಲಾ ಕುಮಾರ್ ಮತ್ತು ಮನೀಷಾ ಚೌಧರಿ
ಅಚ್ಚಾಬಿಯ ರಂಗುರಂಗಿನ ಕೊಡೆ	ಐತಿಹ್ಯ ಅಶೋಕ್ ಕುಮಾರ್	ಐತಿಹ್ಯ ಅಶೋಕ್ ಕುಮಾರ್
ನನ್ನ ಹಳದಿ ಕೊಡೆ	ಪೂಜನಾ ಪ್ರಸನ್ನ	ಪೂಜನಾ ಪ್ರಸನ್ನ
ಮೀರ ಮತ್ತು ಅಮೀರ	ಲಾವಣ್ಯಾ ನಾಯ್ಡು	ನಿಮ್ಮಿ ಚಾಕೊ
ಚಳಿಗಾಲದಲ್ಲಿ ಬಿಸಿಬಿಸಿ ಚಹಾ	ಪ್ರಿಯಾ ಕುರಿಯನ್	ಮಾಲಾ ಕುಮಾರ್ ಮತ್ತು ಮನೀಷಾ ಚೌಧರಿ
ಟಿನಿ ಮೆನಾಳ ಪರ್ವತಾರೋಹಣ	ಓಗಿನ್ ನಯಂ	ಶಿಖಾ ತ್ರಿಪಾಠಿ
ಪುಕ್ಕಟೆ ಕುಲ್ಫಿ	ಅಲಂಕೃತಾ ಅಮಾಯಾ	ಅಲಂಕೃತಾ ಅಮಾಯಾ
ಅಂತರಿಕ್ಷ ನಿಯಮಗಳು	ಕನಾಟೊ ಜಿಮೊ	ಅಪರ್ಣಾ ಕಪೂರ್ ಮತ್ತು ಬಿಜಲ್ ವಚ್ಚರಜನಿ
ಇವತ್ತು ನಾನು	ಸಂಧ್ಯಾ ಪ್ರಭಾತ್	ವರ್ಷಾ ಶೇಷನ್
ಮಿಂಗ್ ಮಿಂಗ್ ಎಂಬ ಕರಡಿಮರಿ	ವಿಷ್ಣು ಎಂ ನಾಯರ್	ಜೆರಿ ಪಿಂಟೊ
ಘುಮ್-ಘುಮ್ ಘರಿಯಾಲಿಯ ಅದ್ಭುತ ಸಾಹಸ	ರೋಶ್	ಅಪರ್ಣಾಕಪೂರ್
ರಾಜಮೋಹನಾ ಕೆಲೋಥ್: ಕೀಟಶೋಧಕಿಯ ದೊಡ್ಡ ಜಗತ್ತು	ಜೋನ್ನಾ ದಾವಾಲಾ	ಶ್ವೇತಾ ಗಣೇಶ್ ಕುಮಾರ್
ಶುಂಠಿ ಮಿಠಾಯಿ	ಸಿದ್ಧಿ ವರ್ತಕ್	ವಸೀಮ್ ಬಾರಿ ಮಣೇರ್

ಪ್ರಥಮ್ ಬುಕ್ಸ್ ಮಕ್ಕಳು ಓದುವ ಖುಷಿಯನ್ನು ಕಂಡುಕೊಳ್ಳಲು ನೆರವಾಗಲು ಹಲವು ಭಾಷೆಗಳಲ್ಲಿ ಪುಸ್ತಕಗಳನ್ನು ರೂಪಿಸುತ್ತಿದೆ. ಪ್ರತಿಬಾರಿ ಮಕ್ಕಳು ತಮ್ಮ ಮಾತೃಭಾಷೆಯಲ್ಲಿನ ಪುಸ್ತಕವನ್ನು ಕೈಯಲ್ಲಿ ಹಿಡಿದಾಗ ತರಗತಿಯಲ್ಲಿ ಉತ್ಸಾಹದ ಅಲೆಯೊಂದು ಏಳುತ್ತದೆ. ಈ ಅನುಭವಗಳಿಂದ ಪ್ರೇರಿತರಾಗಿ, ಈ ವರ್ಷದ ವಾರ್ಷಿಕ ವರದಿಯ ವಿನ್ಯಾಸದಲ್ಲಿ ನಾವು ಪುಸ್ತಕಗಳನ್ನು ಪ್ರಕಟಿಸಿರುವ ಭಾಷೆಗಳ ವರ್ಣಮಾಲೆಯನ್ನು ಬಳಸಿದ್ದೇವೆ. ಆ ಮೂಲಕ ಭಾರತೀಯ ಭಾಷೆಗಳಿಗೆ ಗೌರವ ಸಲ್ಲಿಸಿದ್ದೇವೆ.

Pratham Books

#621, 2nd floor, 5th Main, OMBR Layout,
Banaswadi, Bengaluru 560043
T: +91 80 42052574 / 41159009
New Delhi | T: +91 11 41042483

www.prathambooks.org
www.storyweaver.org.in
www.donateabook.org.in